APPENDIX A.

I.

To

MOKSHAGUNDAM VISVESVARAYA, Esq., C.I.E.,

Dewan of Mysore.

Sir,

As the representative of the Kolar Gold Field Mining Board, I beg to convey to you their best thanks for granting them the opportunity of again placing before you matters connected with the gold mining industry.

Mysore Mines Regulation, 1906.—It is a matter of gratification to us to record another successful year's working of this Act, and doubtless that feeling is also shared by His Highness' Government. The results of the year's operations and the smoothness with which the provisions of the Mines Regulation have been carried out, without entailing any inconvenience or hardship on the resident population or the ever increasing number of people visiting the Field daily are, we feel, due not only to the excellent judgment which was shown in drafting the provisions of the Regulation, but also to the vigilance and tact displayed by the District Superintendent of Police and his staff.

For some years past it has been our earnest wish to obtain the extension of the Act to the Kolar Gold Field Railway, and it was with great pleasure that we recently received official intimation that the Imperial Government had sanctioned the transfer of jurisdiction as a tentative measure. We look forward with confidence to results being shown during the probationary period fully justifying the concession. We trust that at the end of this year the Government of His Highness the Maharaja will further accord their support for the fuller protection of the mining industry by recommending to the Imperial Government the application of Sections 5 to 20 of the Regulation to the Railway premises.

We are pleased to note that the assent of His Highness has been given to the new Section substituted for Section 17, whereby the powers for the exclusion of undesirable persons are now vested in the District Superintendent of Police, an arrangement which we anticipate will be of distinct advantage to the community.

Cauvery Power Reservoir.—It is with much regret that we have to record a serious shortage of Electrical Power during the months of March, April, May and June, which has resulted not only in considerable curtailment of mining operations, by almost total suspension of underground developments, but also loss to the State in reduced Revenue caused by the stoppage of approximately 4—5ths of the total power over the greater part of the period mentioned. The position brought about by the recent deficiency in rainfall, emphasises the advantage that will accrue on the early completion of the Cauvery Reservoir which is now in course of construction.

Augmentation of Police Force.—In 1912 we had the pleasure of conveying to you our thanks for the augmentation of the Police Force on the Field, and it is with some reluctance that we again find it necessary to refer to this subject. Although the extra force then provided has proved of considerable utility, we feel that additional members are still required for the purpose of more fully patrolling the residential portions of the Field, as during the past year there has been a large number of house burglaries, and in many cases no arrests have been made. The Mining Companies maintain a force of 91 men to carry out patrol duties solely in the vicinity of bungalows, but we submit this is essentially work that should be entrusted to the police, which with the present strength is not possible. We would therefore ask that the question of employment of additional men for this purpose be favourably considered by Government.

Roads.—For some years past the roads on the Field and the main arteries leading thereto, have been kept in good repair, but during the past 12 months their condition has left much to be desired. The system of perfunctory patching which appears to have been generally adopted through the district is one which, by reason of the heavy traffic, can hardly be expected to give satisfactory results, and we would submit that more systematic repairs are urgently needed.

Public Health.—(*a*) *Epidemic Diseases.*—We are very pleased to state that the past year has dealt lightly with us in respect to epidemics of infectious diseases. Our thanks are due to the Medical Officer of Health and other Government officials who kept us in touch with the conditions prevailing in the area surrounding the Mines, thus enabling us to take precautions when necessary.

(*b*) *Bethamangalam Water Distribution Tank.*—We have recently received notice from the Kolar Gold Field Sanitary Board that the work of covering this tank has been sanctioned, for which we have to tender you our best thanks.

(c) Maternity and General Hospitals.—It is with keen regret that we have to again bring to your notice the non-opening of the former, and the incomplete accommodation provided in the latter. Our Address last year expressed the hope that before it was presented to you Sir, the Maternity Hospital would have opened its doors for the benefit of the many poor women on the Field who need its help. Our Chief Medical Officer, representing the Board, was shown the furniture, fittings, etc., and inferred from what he was told, that a month or so at the most would see the Institution opened. A full year has passed and we seem to be no nearer the realization of our hopes than we were when we last addressed you. We understand the question of quarters for the staff is the stumbling block. May we suggest that temporary quarters be procured in Robertsonpet until such time as the bungalows that have been acquired are fit to receive their occupants.

(*d*) *Government General Hospital.*—We have received with great pleasure a copy of the Order dated 25th July 1914 on Government Proceedings No. 2473-7—Med. 227-10-4, dated the 27th September 1911, and the Order thereon No. 4079-83—Med. 217-12-7, *viz.*, for the provision of 2 Wards for Europeans and Anglo-Indians at the Civil Hospital. We regret to state, however, that up to the present no steps whatever have been taken to show that this order is being given effect to.

Closing Remarks.—It is with much pleasure we refer to the visits to the Mines, in December last, of His Highness the Maharaja, accompanied by His Highness the Yuvaraja. The interest displayed by His Highness not only in the various branches of our work on surface but also underground, as evidenced by his visit to the working of the Mysore Mine, accompanied we were pleased to observe by the ladies of the Royal Household, gave great gratification to every one concerned, both here and in London.

It may not be out of place to make a reference here to the great struggle in which the Empire is engaged on the Continent of Europe, and to express our admiration at the magnificent generosity of His Highness the Maharaja, in placing fifty lakhs of rupees and the resources of his State at the disposal of His Majesty The King-Emperor.

The effects of a war of this magnitude must of a necessity disturb industries to some extent throughout almost the whole of the civilized world, but it is with some confidence that we are able to anticipate that the gold mining industry here will be carried on without any appreciable decrease in the output, or curtailment of operations generally.

In view of the numbers employed, we feel that the Government of His Highness will share our satisfaction at this position.

In conclusion we thank the Government of His Highness for the sympathetic manner in which our requests are invariably received, and also offer our congratulations on another year of prosperity and progress in the State, over whose affairs, you Sir, in the distinguished office of Dewan, have so ably presided.

C. H. RICHARDS,
Chairman.

30th September 1914.

Translation of the above.

I.

ಮೈಸೂರು ಸಂಸ್ಥಾನದ ದಿವಾನರವರಾದ ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಎಸ್ಕೈವೈರ್,
ಸಿ. ಐ. ಇ. ಯವರ ಸನ್ನಿಧಾನಕ್ಕೆ.

ಸ್ವಾಮಿ,

ಚಿನ್ನದ ಗಣಿಗಳ ಕೈಗಾರಿಕೆಗೆ ಸಂಬಂಧಪಟ್ಟ ಸಂಗತಿಗಳನ್ನು ಪುನಃ ತಮ್ಮಲ್ಲಿ ಅರಿಕೆ ಮಾಡಲು ಕೋಲಾರದ ಗೋಲ್ಡ್‌ಫೀಲ್ಡ್ ಮೈನಿಂಗ್ ಬೋರ್ಡಿನವರಿಗೆ ತಾವು ಅವಕಾಶವನ್ನು ಕೊಟ್ಟಿದ್ದಕ್ಕಾಗಿ, ಅವರ ವಿನಯ ವಂದನೆಗಳನ್ನು ಅವರ ಪ್ರತಿನಿಧಿಯಾಗಿ ನಾನು ತಿಳಿಯಪಡಿಸುತ್ತೇನೆ.

1906ನೆಯ ಇಸವಿ ಮೈಸೂರು ಗಣಿಗಳ ರೆಗ್ಯುಲೇಷನು.—ಈ ರೆಗ್ಯುಲೇಷನಿನ ಪ್ರಕಾರ ನಡಿಸಿದ ಕಾರ್ಯಗಳಿಂದ ಮತ್ತೊಂದು ವರ್ಷಪ್ರಯೋಜನವುಂಟಾಗಿರುತ್ತದೆಂದು ತಿಳಿಸಲು ನಮಗೆ ತುಂಬಾ ಸಂತೋಷವಾಗುತ್ತದೆ; ಈ ಸಂತೋಷಾನುಭವದಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರೂ ಭಾಗಿಗಳಾಗಿರುವರೆಂಬುದಕ್ಕೆ ಸಂದೇಹವಿಲ್ಲ. ಗಣಿಗಳಲ್ಲಿ ವಾಸಮಾಡುತ್ತಿರುವ ಜನಗಳಿಗಾಗಲೀ, ಪ್ರತಿದಿವಸವೂ ಅವುಗಳನ್ನು ನೋಡುವುದಕ್ಕಾಗಿ ಹೆಚ್ಚಿ ಹೆಚ್ಚಿ ಬರುತ್ತಿರುವ ನೋಟಕರಿಗಾಗಲೀ ಯಾವ ಅನಾನುಕೂಲ್ಯವನ್ನೂ ಕಷ್ಟವನ್ನೂ ಉಂಟುಮಾಡದಂತೆ, ಗಣಿ ರೆಗ್ಯುಲೇಷನಿನ ನಿಯಮಗಳು ಬಂದು ವರ್ಷದವರೆಗೆ ಜಾರಿಯಲ್ಲಿ ಬಂದಿರುತ್ತವೆ. ಇದಕ್ಕೆ ಸದರಿ ರೆಗ್ಯುಲೇಷನಿನ ನಿಯಮಗಳ ರಚನೆಯಲ್ಲಿ ತೋರ್ಪಡಿಸಿದ ದಿವ್ಯವಾದ ವಿವೇಚನಾಶಕ್ತಿಮಾತ್ರವಲ್ಲದೆ, ಡಿಸ್ಟ್ರಿಕ್ಟ್ ಪೊಲೀಸ್ ಸೂಪರ್‌ಟಿಂಡೆಂಟರ ಮತ್ತು ಅವರ ಶಿಬ್ಬಂದಿಯ ಜಾಗರೂಕತೆಯೂ ಚಾಕಚಕ್ಯವೂ ಕಾರಣಗಳಾಗಿರುತ್ತವೆ ಎಂಬದಾಗಿ ನಾವು ಭಾವಿಸಿರುತ್ತೇವೆ.

ಕೋಲಾರದ ಚಿನ್ನದ ಗಣಿಗಳ ರೈಲ್ವೇಗೂ ಸದರಿ ರೆಗ್ಯುಲೇಷನು ಅನ್ವಯಿಸುವಂತೆ ಹುಕುಂ ಪಡೆಯಬೇಕೆಂಬದಾಗಿ ಕೆಲವು ವರ್ಷಗಳಿಂದ ನಮಗೆ ತುಂಬಾ ಕುತೂಹಲವಿದೆ. ಯಃಕ್ಶ್ಚಾರಿಯನ್ನು ಹಂಗಾಮಿಯಾಗಿ ವರ್ಗಾಯಿಸುವದಕ್ಕೆ ಸಾರ್ವಭೌಮ ಸರ್ಕಾರದವರು ಮಂಜೂರಾತಿಯನ್ನು ಕೊಟ್ಟಿರುತ್ತಾರೆಂಬದಾಗಿ ಈಚೆಗೆ ಸರ್ಕಾರಿಯಾಗಿ ನಮಗೆ ತಿಳಿಯಬಂದುದರಿಂದ ಬಹಳ ಸಂತೋಷವಾಯಿತು. ಈ ರಿಯಾಯಿತಿ ಕೊಟ್ಟಿರುವುದು ಸಾರ್ಥಕವೆನ್ನಿಸುವುದಕ್ಕೆ ಈ ಅಜಮೊಯಿಷಿ ಕಾಲದಲ್ಲಿ ಬಳ್ಳೇ ಫಲಿತಾಂಶಗಳನ್ನು ತೋರಿಸುವರೆಂದು ನಾವು ನಂಬಿಕೆಯಿಂದ ನಿರೀಕ್ಷಿಸುತ್ತಿದ್ದೇವೆ. ಈ ಅಜಮೊಯಿಷಿ ವರ್ಷದ ಕೊನೆಯಲ್ಲಿ, ಶ್ರೀಮನ್ ಮಹಾರಾಜರವರ ಸರ್ಕಾರದವರು, ಈ ರೆಗ್ಯುಲೇಷನಿನ 5ರ ಆಗಾಯಿತು 20ನೆಯವರೆಗಿನ ಪ್ರಕರಣಗಳನ್ನು ರೈಲ್ವೆ ಆವರಣಗಳಿಗೆ ಅನ್ವಯಿಸುವ ವಿಷಯದಲ್ಲಿ ಸಾರ್ವಭೌಮರ ಸರ್ಕಾರದವರಿಗೆ ಸಿಫಾರ್ಸು ಮಾಡುವವರ ಮೂಲಕ, ಗಣಿಯ ಕೈಗಾರಿಕೆಗೆ ಇನ್ನೂ ಹೆಚ್ಚಾದ ರಕ್ಷಣೆಗಾಗಿ ತಮ್ಮ ಸಹಾಯವನ್ನು ಮಾಡುವರೆಂದು ನಾವು ನಂಬಿದ್ದೇವೆ.

ಗಣಿ ರೆಗ್ಯುಲೇಷನಿನ 17ನೆಯ ಪ್ರಕರಣಕ್ಕೆ ಬದಲಾಗಿ ಒಂದು ಹೊಸ ಪ್ರಕರಣವನ್ನು ಸೇರಿಸುವುದಕ್ಕೆ ಶ್ರೀಮನ್ ಮಹಾರಾಜರವರು ತಮ್ಮ ಅನುಮತಿಯನ್ನು ಕೊಟ್ಟಿರುತ್ತಾರೆಂದು ಕೇಳಿ ಸಂತೋಷವುಳ್ಳವರಾಗಿದ್ದೇವೆ. ಈ ಹೊಸ ಪ್ರಕರಣದ ಪ್ರಕಾರ ಬದ್ದಚಾಲು ಮನುಷ್ಯರನ್ನು ಹೊರಗೆ ಹೊರಡಿಸುವ ಅಧಿಕಾರವು ಈಗ ಡಿಸ್ಟ್ರಿಕ್ಟ್ ಪೊಲೀಸು ಸೂಪರ್‌ಟಿಂಡೆಂಟರಿಗೆ ಸೇರಿರುತ್ತದೆ. ಈ ಏರ್ಪಾಟಿನಿಂದ ಇಲ್ಲಿನ ಜನಗಳಿಗೆ ಬಳ್ಳೇ ಅನುಕೂಲವಾಗುವದೆಂದು ನಾವು ನಿರೀಕ್ಷಿಸುತ್ತೇವೆ.

ಕಾವೇರೀ ವಿದ್ಯುಚ್ಛಕ್ತಿಯ ಜಲಾಶಯ :—ಮಾರ್ಚಿ, ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಲ್ಲಿ ವಿದ್ಯುಚ್ಛಕ್ತಿಯ ಸರಬರಾಯಿಯು ಬಹಳ ಕಮ್ಮಿಯಾಗಿತ್ತೆಂದು ತಿಳಿಸಲು ನಾವು ತುಂಬಾ ವಿಷಾದಿಸುತ್ತೇವೆ. ಇದರಿಂದ ಗಣಿಯ ಸಂಬಂಧವಾದ ಕೆಲಸಗಳನ್ನು ಬಹಳಮಟ್ಟಿಗೆ ಕಮ್ಮಿ ಮಾಡಬೇಕಾಗಿಬಂದು, ಭೂಮಿಯ ಒಳಗಿನ ಸುರಂಗಗಳನ್ನು ವೃದ್ಧಿಮಾಡುವ ಕೆಲಸವನ್ನು ಸಂಪೂರ್ಣವಾಗಿ ನಿಲ್ಲಿಸಬೇಕಾಯಿತು. ಮೇಲ್ಕಂಡ ತಿಂಗಳುಗಳಲ್ಲಿ ವಿಶೇಷಭಾಗದ ಕಾಲದಲ್ಲಿ ಒಟ್ಟು ವಿದ್ಯುಚ್ಛಕ್ತಿಯ ಪೈಕಿ ಸುಮಾರು 5ರಲ್ಲಿ 4 ಭಾಗವನ್ನು ಸರಬರಾಯಿಮಾಡದೆ ಹೋದದ್ದರಿಂದ, ಹುಟ್ಟುವಳಿಯು ಕಮ್ಮಿಯಾಗಿ ಸರ್ಕಾರಕ್ಕೆ ನಷ್ಟವೂ ಉಂಟಾಯಿತು. ಈಚೆಗೆ ಮೆಳೆಯು ಕಮ್ಮಿಯಾಗಿ ಪ್ರಾಪ್ತವಾಗಿರುವ ಕಾಲಸ್ಥಿತಿಯನ್ನು ನೋಡಿದರೆ, ಈಗ ಕಟ್ಟಿಸುತ್ತಿರುವ ಕಾವೇರೀ ಜಲಾಶಯವನ್ನು ಎಷ್ಟು ಜಾಗ್ರತೆಯಲ್ಲಿ ಪೂರೈಸಿದರೆ ಅಷ್ಟು ಪ್ರಯೋಜನ ಉಂಟೆಂಬುದು ವ್ಯಕ್ತವಾಗುತ್ತದೆ.

ಪೊಲೀಸು ಸಿಬ್ಬಂದಿಯನ್ನು ಹೆಚ್ಚಿಸುವುದು :—1912ನೆಯ ವರ್ಷದಲ್ಲಿ, ಗಣಿ ಪ್ರದೇಶದ ಪೊಲೀಸು ಸಿಬ್ಬಂದಿಯನ್ನು ಹೆಚ್ಚಿಸಿದ್ದಕ್ಕೋಸ್ಕರ ನಮ್ಮ ವಂದನೆಗಳನ್ನು ತಮಗೆ ತಿಳಿಯಪಡಿಸಲು ಅವಕಾಶವು ದೊರೆಯಿತು. ಈಗ ಅದೇ ವಿಷಯವನ್ನೇ, ನಮಗೆ ಸಂಪೂರ್ಣವಾಗಿ ಮನಸ್ಸಿಲ್ಲವಾದರೂ, ಅದನ್ನು ಪುನಃ ಸೂಚಿಸಲೇಬೇಕಾಗಿ ಬಂದಿರುತ್ತದೆ. ಆಗ್ಗೆ ಕೊಟ್ಟ ಹೆಚ್ಚು ಸಿಬ್ಬಂದಿಯಿಂದ ವಿಶೇಷ ಪ್ರಯೋಜನವಾಗಿದ್ದರೂಕೂಡ, ಹೋದವರ್ಷದಲ್ಲಿ ಕನ್ನಾಚೋರಿಗಳು ವಿಶೇಷವಾಗಿ ನಡೆದು, ಅನೇಕ ಸಂದರ್ಭಗಳಲ್ಲಿ ಕಳ್ಳರನ್ನು ದಸ್ತಗಿರಿ ಮಾಡಿರುವದಿಲ್ಲವಾದ್ದರಿಂದ, ಗಣಿಪ್ರದೇಶದಲ್ಲಿ ವಾಸವಾಗಿರತಕ್ಕ ಭಾಗಗಳನ್ನು ಇನ್ನೂ ಚನ್ನಾಗಿ ಉಸ್ತುವಾರಿ ಮಾಡುವುದಕ್ಕೋಸ್ಕರ, ಹೆಚ್ಚು ಸಿಬ್ಬಂದಿಯು ಬೇಕಾಗಿರುತ್ತದೆಂದು ನಾವು ಎಣಿಸಿರುತ್ತೇವೆ. ಬಂಗಲೆಗಳ ಸಮೀಪದಲ್ಲಿ ಉಸ್ತುವಾರಿ ಕೆಲಸಗಳಿಗೋಸ್ಕರವೇ ಗಣಿ ಕಂಪೆನಿಗಳವರು 91 ಜನರುಳ್ಳ ಬಂದು ಫಾಜನ್ನು ಇಟ್ಟುಕೊಂಡಿರುತ್ತಾರೆ, ಆದರೆ ಈ ಉಸ್ತುವಾರೀ ಕೆಲಸವನ್ನು ಮುಖ್ಯವಾಗಿ ಪೊಲೀಸಿನವರು ಮಾಡತಕ್ಕದ್ದಾಗಿದೆ. ಈಗ ಇರತಕ್ಕ ಪೊಲೀಸು ಸಿಬ್ಬಂದಿಯವರಿಗೆ ಈ ಕೆಲಸ ಮಾಡಲು ಸಾಧ್ಯವಲ್ಲ. ಆದುದರಿಂದ ಈ ಕೆಲಸಕ್ಕಾಗಿ ಹೆಚ್ಚು ಜನರನ್ನು ನೇಮಿಸುವ ವಿಷಯವನ್ನು ಸರ್ಕಾರದವರು ಅನುಕೂಲವಾಗಿ ಆಲೋಚಿಸಬೇಕೆಂದು ಕೇಳಿಕೊಳ್ಳುತ್ತೇವೆ.

ರಸ್ತೆಗಳು.—ಕೆಲವು ವರ್ಷಗಳಿಂದೀಚಿಗೆ ಗಣಿ ಪ್ರದೇಶದ ರಸ್ತೆಗಳನ್ನೂ ಅವುಗಳಿಗೆ ಸೇರತಕ್ಕ ಮುಖ್ಯ ಉಪರಸ್ತೆಗಳನ್ನೂ ಸಹ ಸರಿಯಾದ ದುರಸ್ತಿನಲ್ಲಿಟ್ಟುಕೊಂಡಿದ್ದರು. ಆದರೆ ಕಳೆದ 12 ತಿಂಗಳುಗಳಲ್ಲಿ ಅವುಗಳ ಸ್ಥಿತಿಯು ಚೆನ್ನಾಗಿಲ್ಲ. ಅಲ್ಲಲ್ಲಿ ಅಜಾಗರೂಕತೆಯಿಂದ ತೇಪೆಯ ಕೆಲಸವನ್ನು ಮಾಡುವಪದ್ಧತಿಯನ್ನು ಸಾಮಾನ್ಯವಾಗಿ ಈ ಡಿಸ್ಟ್ರಿಕ್ಟಿನಲ್ಲಿ ಇರುವಂತೆ ಇಲ್ಲಿಯೂ ಇಟ್ಟುಕೊಂಡಿರುವುದರಿಂದ, ವಿಶೇಷ ಆಮದ್‌ರಫ್ತಾಗುವ ಪ್ರಯುಕ್ತ ತೃಪ್ತಿಕರವಾದ ಫಲಿತಾಂಶಗಳು ಆಗತಕ್ಕ ನಿರೀಕ್ಷಣೆಯೇ ಇಲ್ಲ. ಇನ್ನೂ ಉತ್ತಮವಾದ ರೀತಿಯಲ್ಲಿ ದುರಸ್ತಿ ಕೆಲಸವನ್ನು ಜಾಗ್ರತೆಯಲ್ಲಿ ನಡಿಸಬೇಕಾಗಿರುತ್ತದೆ.

(*a*) ಜನಾರೋಗ್ಯ, ಸಾಂಕ್ರಾಮಿಕ ಜಾತ್ಯಗಳು :—ಕಳೆದ ವರ್ಷದಲ್ಲಿ ಸಾಂಕ್ರಾಮಿಕ ರೋಗಗಳ ಬಾಧೆಯು ನಮ್ಮ ಗಣಿ ಪ್ರದೇಶದಲ್ಲಿ ಅತ್ಯಲ್ಪವಾಗಿತ್ತೆಂಬುದು ಸಂತೋಷಕರವಾಗಿದೆ. ಗಣಿಯ ಸುತ್ತುಮುತ್ತಲ ಪ್ರದೇಶದ ಸ್ಥಿತಿಗಳನ್ನು ಕೂಡಕೂಡಲೆ ಹೆಲ್ತ್ ಮೆಡಿಕಲ್ ಆಫೀಸರವರೂ ಇತರ ಸರ್ಕಾರೀ ನೌಕರರೂ ನಮಗೆ ತಿಳಿಸುತ್ತಾ ಇದ್ದದ್ದರಿಂದ, ಆವಶ್ಯಕವಾದಾಗ ನಾವು ಸಕಾಲದಲ್ಲಿ ತಕ್ಕ ಮುಂಜಾಗರೂಕತೆಯ ಏರ್ಪಾಡುಗಳನ್ನು ಮಾಡುವದಕ್ಕೆ ಸಾಧ್ಯವಾಗುತ್ತಿತ್ತು. ಇದಕ್ಕಾಗಿ ಸದರಿ ಆಫೀಸರುಗಳು ನಮ್ಮ ವಂದನೆಗಳಿಗೆ ಪಾತ್ರರಾಗಿರುತ್ತಾರೆ.

(*b*) ಬೇತಮಂಗಲದ ನೀರು ಸರಬರಾಯಿ ಕೆರೆ :—ಈ ಕೆರೆಯ ಆವರಣದ ಕಾಮಗಾರಿ ಕೆಲಸವು ಸರ್ಕಾರದಿಂದ ಮುಂಜೂರಾಗಿರುತ್ತದೆಂದು ಕೋಲಾರದ ಚಿನ್ನದ ಗಣಿ ಪ್ರದೇಶದ ಸ್ಯಾನಿಟರಿ ಬೋರ್ಡಿನಿಂದ ನಮಗೆ ತಿಳಿಯಬಂದಿರುತ್ತದೆ. ಇದಕ್ಕಾಗಿ ತಮಗೆ ನಮ್ಮ ವಂದನೆಗಳನ್ನು ತಿಳಿಸುತ್ತೇವೆ.

(*c*) ಹೆರಿಗೆ ಮತ್ತು ಜನರಲ್ ಆಸ್ಪತ್ರೆಗಳು :—ಹೆರಿಗೆ ಆಸ್ಪತ್ರೆಯನ್ನು ಇನ್ನೂ ಇಟ್ಟಿಲ್ಲವೆಂಬ ಅಂಶವನ್ನೂ ಜನರಲ್ ಆಸ್ಪತ್ರೆಯಲ್ಲಿ ಬದಗಿಸಿರುವ ಸ್ಥಳವಸತಿ ಸಾಲದೆಂಬ ಅಂಶವನ್ನೂ ತಮ್ಮ ಅವಗಾಹನೆಗೆ ಪುನಃ ತರಬೇಕಾಗಿ ಬಂದದ್ದಕ್ಕಾಗಿ ನಾವು ತುಂಬಾ ವಿಷಾದಿಸುತ್ತೇವೆ. ಹೋದವರ್ಷ ನಮ್ಮ ಅಭಿನಂದನ ಪತ್ರಿಕೆಯನ್ನು ಒಪ್ಪಿಸುವದಕ್ಕೆ ಮುಂಚೆಯೇ ಗಣಿಪ್ರದೇಶದಲ್ಲಿ ಹೆರಿಗೆ ಆಸ್ಪತ್ರೆಯ ಸಹಾಯ ಬೇಕಾಗಿವ್ವ ಅನೇಕ ಬಡ ಹೆಂಗಸರ ಪ್ರಯೋಜನಕ್ಕಾಗಿ ಸದರಿ ಹೆರಿಗೆ ಆಸ್ಪತ್ರೆಯ ಕೆಲಸವು ಉಪಕ್ರಮವಾಗುವುದೆಂದು ನಾವು ಸದರಿ ಪತ್ರಿಕೆಯಲ್ಲಿ ಸೂಚಿಸಿದ್ದೆವು. ಬೋರ್ಡಿನವರ ಪರವಾಗಿ ಇರುವ ನಮ್ಮ ಚೀಫ್ ಮೆಡಿಕಲ್ ಆಫೀಸರಿಗೆ ಹಾಸಿಗೆ ಮಂಚ ವಗೈರೆ ಸಾಮಾನುಗಳನ್ನು, ತೋರಿಸಿ ಹೇಳಿದುದರಮೇಲೆ, ಬಂದೆರಡು ತಿಂಗಳುಗಳಲ್ಲಿ ಸದರಿ ಆಸ್ಪತ್ರೆಯಲ್ಲಿ ಕೆಲಸವು ಉಪಕ್ರಮವಾಗಬಹುದೆಂದು ಅವರು ಊಹಿಸಿದರು. ಒಂದು ವರ್ಷ ಕಳೆದುಹೋದರೂಕೂಡ, ಹೋದವರ್ಷ ನಮ್ಮ ಅಭಿನಂದನ ಪತ್ರಿಕೆಯನ್ನು ಒಪ್ಪಿಸಿದಾಗ ಎಲಕ್ಲಾ ಯಾವ ಸ್ಥಿತಿಯಲ್ಲಿ ಇತ್ತೋ ಆ ಸ್ಥಿತಿಯಲ್ಲಿಯೇ ಇರುತ್ತದೆಯೇ ಹೊರತು ನಮ್ಮ ಕೋರಿಕೆಯು ಕ್ಷಿಪ್ರದಲ್ಲಿ ನೆರವೇರುವಂತೆ ಕಾಣಲಿಲ್ಲ. ಈ ಆಸ್ಪತ್ರೆಯ ಸಿಬ್ಬಂದಿಯವರಿಗೆ ವಾಸದ ಮನೆಗಳನ್ನು ಒದಗಿಸುವದಕ್ಕೆ ಉಂಟಾಗಿರುವ ಅನಾನುಕೂಲತೆಯೇ ಈ ಅಡಚನೆಗೆ ಕಾರಣವೆಂದು ತಿಳಿಯಬರುತ್ತದೆ. ಸರ್ಕಾರದವರು ಸಂಪಾದಿಸಿರುವ ಬಂಗಲೆಗಳು ವಾಸಕ್ಕೆ ಅರ್ಹವಾಗಿರುವಂತೆ ಮಾಡುವತನಕ, ರಾಬರ್ಟ್‌ಸನ್ ಪೇಟೆಯಲ್ಲಿ ಹಂಗಾಮಿಯಾಗಿ ಕಟ್ಟಡಗಳನ್ನು ಸಂಪಾದಿಸಬೇಕೆಂದು ಸೂಚಿಸಲು ಅಪೇಕ್ಷಿಸುತ್ತೇವೆ.

(*d*) ಸರ್ಕಾರೀ ಜನರಲ್ ಆಸ್ಪತ್ರೆ.—ಸಿವಿಲ್ ಆಸ್ಪತ್ರೆಯಲ್ಲಿ ಯೂರೋಪಿಯರ್ ಜನಗಳಿಗಾಗಿಯೂ ಆಂಗ್ಲೋ ಇಂಡಿಯರ್ ಜನಗಳಿಗಾಗಿಯೂ ಎರಡು ವಾರ್ಡುಗಳನ್ನು ಕೊಡತಕ್ಕ ವಿಷಯದಲ್ಲಿ ನಾದರಾಗಿರುವ 1911ನೆಯ ಸೆಪ್ಟೆಂಬರು 27ನೆಯ ಮೆರ್ಕುಮಿನ 2473–7–ಮೆಡಿಕಲ್ 227–10–4ನೆಯ ನಂಬರು ಸರ್ಕಾರೀ ಪ್ರೊಸಿಡಿಂಗ್ಸ್‌ವೇಲೆ ಆದ 1914ನೆಯ ಜುಲೈ 25ನೆಯ ತಾರೀಖಿನ ಆರ್ಡರ್ ನಕಲನ್ನೂ, ಮತ್ತು 4079–83–ಮೆಡಿಕಲ್ 217–12–7ನೆಯ ನಂಬರ ಮೇಲಿನ ಆರ್ಡರನ್ನೂ ನೋಡಿ ಬಹಳ ಸಂತೋಷವಾಯಿತು. ಆದರೆ ಈ ಆರ್ಡರ್‌ಮೇರೆಗೆ ಜಾರಿಮೊಡುವದಕ್ಕೆ ಇದುವರೆಗೆ ಯಾವ ಪ್ರಯತ್ನಗಳನ್ನೂ ಮೊಡಿರುವದಿಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ.

ಉಪಸಂಹಾರ ವಾಕ್ಯಗಳು.—ಕಳದ ಡಿಸೆಂಬರು ತಿಂಗಳಲ್ಲಿ ಶ್ರೀಮೆ ಮಹಾರಾಜರವರು ಶ್ರೀಮದ್ಯುವರಾಜರವರೊಡಗೂಡಿ ಗಣಿಗೆ ದಯೆಮೊಡಿಸಿದ್ದ ವಿಷಯವನ್ನು ಸೂಚಿಸಲು ತುಂಬಾ ಸಂತೋಷವುಳ್ಳವರಾಗಿರುತ್ತೇವೆ. ಶ್ರೀಮೆ ಮಹಾರಾಜರವರು ರಾಜಕುಟುಂಬಕ್ಕೆ ಸೇರಿದ ಸ್ತ್ರೀಜನದೊಡಗೂಡಿ ಮೈಸೂರು ಮೈನ್ ಎಂಬ ಗಣಿಯ ಕೆಲಸವನ್ನು ನೋಡುವ ಬಗ್ಗೆ ದಯೆಮೊಡಿಸಿ, ಗಣಿಯ ಮೇಲ್ಗಡೆಯಲ್ಲಿ ಮಾತ್ರವಲ್ಲದೆ ಒಳಗಡೆಯಲ್ಲಿಯೂ ನಡೆಯುತ್ತಿದ್ದ ವಿಧವಿಧವಾದ ಕೆಲಸಗಳನ್ನು ಪರಾಮರ್ಶಿಸಿದ ಕಾಲದಲ್ಲಿ ತೋರ್ಪಡಿಸಿದ ಆಸಕ್ತಿಯು, ಈ ಗಣಿಯಲ್ಲಿಯೂ ಲಡನಿನಲ್ಲಿಯೂ ಇರುವ ಈ ಗಣಿಗೆ ಸಂಬಂಧಪಟ್ಟವರಿಗೆಲ್ಲ ವಿಶೇಷ ಸಂತೋಷವನ್ನು ಉಂಟು ಮೊಡಿರುತ್ತದೆ.

ಯೂರೋಪ್ ಖಂಡದಲ್ಲಿ ಚಕ್ರಾಧಿಪತ್ಯದವರು ಮೊಡುತ್ತಿರುವ ಮಹಾಯುದ್ಧದ ವಿಷಯವನ್ನು ಇಲ್ಲಿ ಪ್ರಸ್ತಾಪಿಸುವುದು ಅಪ್ರಕೃತವಾಗಿರಲಾರದೆಂದು ತಿಳಿಯುತ್ತೇವೆಲ್ಲದೆ, ಶ್ರೀಮೆ ಮಹಾರಾಜರವರು ಘನತೆಯನ್ನು ಹೊಂದಿದ ಶ್ರೀ ಸಾರ್ವಭೌಮರವರ ಅಧೀನದಲ್ಲಿ 50 ಲಕ್ಷ ರೂಪಾಯಿಗಳನ್ನೂ ತಮ್ಮ ಸಂಸ್ಥಾನದ ಸರ್ವಸ್ವವನ್ನೂ ಇಡುವುದರ ಮೂಲಕ ತಮ್ಮ ಘನತರವಾದ ಔದಾರ್ಯವನ್ನು ತೋರಿಸುವ ವಿಷಯದಲ್ಲಿ, ನಮೆಗಳಿಗೆ ತುಂಬಾ ಸಂತೋಷವುಂಟಾಗಿರುತ್ತದೆಂಬ ಅಂಶವನ್ನು ಸೂಚಿಸುತ್ತೇವೆ.

ಇಂಥಾ ಪ್ರಬಲವಾದ ಯುದ್ಧದ ದೆಸೆಯಿಂದ, ಈ ಪ್ರಪಂಚದಲ್ಲಿ ನಾಗರಿಕತೆಯನ್ನು ಪಡೆದ ಎಲ್ಲಾ ಪ್ರದೇಶಗಳಲ್ಲಿಯೂ ನಡೆಯುತ್ತಿರುವ ಕೈಕಾರಿಕೆಗಳಿಗೆ ಸ್ವಲ್ಪಮಟ್ಟಿಗೆ ತೊಂದರೆ ಉಂಟಾಗತಕ್ಕದ್ದು ಸ್ವಾಭಾವಿಕವಾಗಿಯೇ ಇರುತ್ತದೆ, ಆದರೆ ಬಂಗಾರದ ಉತ್ಪತ್ತಿಯು ಕಡಮೆಯಾಗದಹಾಗೆಯೂ, ಸಾಮಾನ್ಯವಾಗಿ ಗಣಿಸಂಬಂಧದ ಕೆಲಸಗಳನ್ನು ಕುಡಿಮೆಮೊಡದಹಾಗೆಯೂ, ಈ ಸಂಸ್ಥಾನದಲ್ಲಿ ನಡೆಯುವ ಬಂಗಾರಗಣಿ ಕೈಗಾರಿಕೆ ಕೆಲಸಗಳನ್ನು ನಡಿಸಿಕೊಂಡು ಬರುವುದಕ್ಕೆ ಸಾಧ್ಯವಾಗಬಹುದೆಂದು ನಾವು ಸ್ವಲ್ಪಮಟ್ಟಿಗೆ ಭರವಸವುಳ್ಳವರಾಗಿ ಇರುತ್ತೇವೆ.

ನೇಮಿಸಲ್ಪಟ್ಟಿರುವ ಕೆಲಸಗಾರರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ, ಶ್ರೀಮೆ ಮಹಾರಾಜರವರ ಸರ್ಕಾರದವರೂ ಕೂಡ ಈ ವಿಷಯದಲ್ಲಿ ಅದೇ ಅಭಿಪ್ರಾಯವುಳ್ಳವರಾಗಿರುವರೆಂದು ನಾವು ನಂಬುತ್ತೇವೆ.

ಶ್ರೀಮೆ ಮಹಾರಾಜರವರ ಸರ್ಕಾರದವರು ನಮ್ಮ ಕೋರಿಕೆಗಳನ್ನು ತಪ್ಪದೆ ನಡಿಸಿಕೊಂಡು ಬರುತ್ತಿರುವುದಕ್ಕಾಗಿ ನಮ್ಮ ವಂದನೆಗಳನ್ನು ಸಮರ್ಪಿಸುತ್ತೇವೆ. ಅಲ್ಲದೆ ತಾವು ಈ ಸಂಸ್ಥಾನದ ವಿಖ್ಯಾತವಾದ ದಿವಾನ ಪದವಿಯಲ್ಲಿದ್ದುಕೊಂಡು, ತಮ್ಮ ಅಧ್ಯಕ್ಷತೆಯಲ್ಲಿ ಇಲ್ಲಿನ ಕಾರ್ಯಗಳನ್ನು ಸಮರ್ಥತೆಯಿಂದ ನಡಿಸಿಕೊಂಡುಬರುತ್ತಾ, ಮತ್ತೊಂದು ವರ್ಷದವರೆಗೆ ಈ ಸಂಸ್ಥಾನದ ಸಂಪತ್ತನ್ನೂ ಪುರೋಭಿವೃದ್ಧಿಯನ್ನೂ ಕಾಪಾಡುತ್ತಾ ಬಂದಿರುವುದಕ್ಕಾಗಿ ನಾವು ನಮ್ಮ ಅಭಿನಂದನಗಳನ್ನು ಸಮರ್ಪಿಸುತ್ತೇವೆ.

1914ನೆಯ ಇಸವಿ
30ನೆಯ ಸೆಪ್ಟಂಬರ್.

ಸಿ. ಎಚ್. ರಿಚರ್ಡ್ಸ್,
ಚೇರ್‌ಮೆನ್,
ಕೋಲಾರದ ಚಿನ್ನದ ಗಣಿಗಳು.

II.

To

M. VISVESVARAYA, Esq., C.I.E.,
Dewan of Mysore.

Sir,

I have been instructed by my Association to bring to the notice of the Government of His Highness the Maharaja of Mysore and to respectfully impress on them the vital necessity for the introduction of a Pest Act into this State in

view of the fact that our industry is seriously threatened by an insect *lecanium veride* that has done such incalculable harm to coffee estates on the Nilgiri and Palni Hills, the earlier an Ordinance can be placed on the Statute Books the better in order to immediately bring under control this pest before it gets out of hand or causes irremediable damage. The Act might be modelled on that of the United States of America and made to apply from time to time to such portions of the coffee planting zone as were found to be infected and a notification to this effect could be published in the *Mysore Gazette* giving details of the area proscribed.

The subject of the Arsikere-Mangalore Railway has been brought to the notice of His Highness the Maharaja's Government so many times and its supreme importance to the Mysore State as a connecting link with the West Coast is so obvious that I will only venture to ask that the early construction and completion of the same may have the Durbar's most serious consideration.

Roads and Communications.—Owing to the want of rain during a portion of 1913-14 when the Public Works Department and Local Fund Boards should have undertaken the repairs of the highways in the malnad and maidan parts of the Hassan District, the work was unavoidably neglected and several of the roads particularly those under the charge of the District Boards and the Hassan-Arsikere road fell into a very bad condition. Lately, however, in the malnad portion of the Hassan District restoration works have been put in hand and a considerable improvement effected. This, we trust, will be continued generally and the roads maintained in as high a stage of efficiency as possible.

In conclusion, I desire to express on behalf of my community to His Highness the Maharaja our high appreciation of his magnificient act of generosity to the Imperial War Fund. His princely gift and the noble sentiments that prompted it will ever be remembered as typical of the traditional generosity of the illustrious House ruling the State.

J. G. H. CRAWFORD,
President, South Mysore Planters' Association.

Translation of the above.

II.

ಮೈಸೂರು ದಿವಾಣರವರಾದ ಎಮ್. ವಿಶ್ವೇಶ್ವರಯ್ಯ, ಸಿ. ಐ. ಇ. ಯವರಿಗೆ.

ಸ್ವಾಮಿ,

ನೀಲಗಿರಿಯಲ್ಲಿಯೂ ಪಳ್ನಿ ಬೆಟ್ಟಗಳಲ್ಲಿಯೂ ಇರುವ ಕಾಫೀ ತೋಟಿಗಳಿಗೆ ಅತ್ಯಧಿಕವಾದ ಹಾನಿಯನ್ನು ಉಂಟುಮಾಡಿರುವ ಬಂದು ವಿಧವಾದ ಕ್ರಿಮಿಯಿಂದ ನಮ್ಮ ಕಾಫೀ ಬೆಳೆಯುವ ಉದ್ಯೋಗಕ್ಕೆ ಬಹುಕೇಡು ಸಂಭವಿಸಬಹುದೆಂಬ ಭೀತಿಯುಂಟಾಗಿರುವುದರಿಂದ, ಈ ಸಂಸ್ಥಾನದಲ್ಲಿ ಬಂದು ಪೆಸ್ಟ್ ಆಕ್ಟ್ (ಎಂದರೆ ಕ್ರಿಮಿ ಬಾಧಾ ವಿಷಯಕ ಶಾಸನ) ಮಾಡುವುದು ಪರಮಾವಶ್ಯವೆಂಬ ವಿಷಯವನ್ನು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರ ಲಕ್ಷ್ಯಕ್ಕೆ ತಂದು ಅವನ್ನು ಅವರ ಮನಸ್ಸಿಗೆ ನಾಟುವಂತೆ ತಿಳಿಯಪಡಿಸಬೇಕೆಂದು ನಮ್ಮ ಸಂಘದವರು ನನಗೆ ಆಜ್ಞಾಪಿಸಿರುತ್ತಾರೆ. ಸದರಿ ಕ್ರಿಮಿಬಾಧೆಯು ನಮ್ಮ ಕೈವಿಾರಿ ಹೋಗುವುದಕ್ಕೆ ಮೊದಲೇ ಅಥವಾ ಅದರಿಹಾರ್ಯವಾದಷ್ಟು ಹಾನಿಯನ್ನು ಮಾಡುವುದಕ್ಕೆ ಮುಂಚೆಯೇ ಅವನ್ನು ತೋಟಿಗೆ ತಂದುಕೊಳ್ಳುವುದಕ್ಕೊೀಸ್ಕರ, ಎಷ್ಟು ಶೀಘ್ರದಲ್ಲಿ ಬಂದು ಕಾನೂನನ್ನು ಮಾಡಿದರೆ ಅಷ್ಟು ಉತ್ತಮವು. ಈ ಕಾನೂನನ್ನು ಅಮೆೀರಿಕ ಖಂಡದ ಸಂಯುಕ್ತ ಸಂಸ್ಥಾನಗಳಲ್ಲಿ ಜಾರಿಯಲ್ಲಿರುವ ಕಾನೂನಿನ ಮಾದರಿಯಲ್ಲಿ ಮಾಡಬಹುದು ಮತ್ತು ಅದು ಕಾಫೀ ಬೆಳೆಯಾಗುವ ಪ್ರದೇಶದ ಯಾವೆಯಾವೆ ಭಾಗಗಳಲ್ಲಿ ಕ್ರಿಮಿಬಾಧೆ ಇರುವುದೋ ಆ ಭಾಗಗಳಿಗೆ ಆಗಿಂದಾಗ ಅನ್ವಯಿಸುವಂತೆ ಮಾಡಬಹುದು. ಈ ವಿಷಯಕ್ಕೆ ಮೈಸೂರು ಗೆಜೆಟ್ಟಿನಲ್ಲಿ ಬಂದು ಇಸ್ತಿಹಾರ್ನಾವೆಯನ್ನು ಪ್ರಾಯಿಷ್‌ಮಾಡಿ, ಸದರಿ ಕಾನೂನು ಅನ್ವಯಿಸುವ ಪ್ರದೇಶದ ತಪ್ಸೀಲುಗಳನ್ನೆಲ್ಲಾ ತಿಳಿಸಬಹುದು.

ಅರಸೀಕೆರೆ ಮಂಗಳೂರು ರೈಲ್ವೆ ವಿಷಯವನ್ನು ಶ್ರೀಮನ್ಮಹಾರಾಜರವರ ಸರ್ಕಾರದ ಲಕ್ಷ್ಯಕ್ಕೆ ಅನೇಕ ವೇಳೆ ತಂದಿರುವುದರಿಂದಲೂ, ಇದರಿಂದ ಮೈಸೂರಿಗೂ ಪಶ್ಚಿಮಸಮುದ್ರತೀರಕ್ಕೂ ಸಂಬಂಧವುಂಟಾಗುವುದರಿಂದ ಇದು ಪರಮ ಮುಖ್ಯ ಕರ್ತವ್ಯವೆಂಬುದು ಸ್ಪಷ್ಟವಾಗಿಯೇ ಇರುವುದರಿಂದಲೂ, ದರ್ಬಾರಿನ

ವರು ಇದನ್ನು ತಮ್ಮ ಅಪೋಷವಾದ ಅವಧಾನಕ್ಕೆ ತಂದುಕೊಂಡು ರೈಲ್ವೆ ರಸ್ತೆಯನ್ನು ಹಾಕಲುಪಕ್ರಮಿಸಿ ಶೀಘ್ರದಲ್ಲಿಯೇ ಪೂರೈಸಬೇಕೆಂದು ಮಾತ್ರ ನಾನು ವಿಜ್ಞಾಪಿಸಿದರೆ ಸಾಕೆಂದು ಎಣಿಸಿರುತ್ತೇನೆ.

ರಸ್ತೆಗಳು.—1913–14ನೆ ಇಸವಿಯಲ್ಲಿ ಕೆಲವುಕಾಲ ಮಳೆ ಬೀಳದೆಹೋಗಿ, ಮರಹನ್ಮತ ಇಲಾಖೆಯವರೂ ಲೋಕಲ್ ಫಂಡ್ಸ್ ಬೋರ್ಡುಗಳವರೂ ಹಾಸನ ಡಿಸ್ಟ್ರಿಕ್ಟಿನ ಮಲ್ನಾಡು ಮೈದಾನ ಪ್ರದೇಶಗಳಲ್ಲಿನ ರಸ್ತೆಗಳನ್ನು ದುರಸ್ತು ಮಾಡಿಸಬೇಕಾಗಿದ್ದಾಗ, ಯತ್ನವಿಲ್ಲದೆ ಕೆಲಸವು ಉಪೇಕ್ಷಿಸಲ್ಪಟ್ಟು, ಅನೇಕ ರಸ್ತೆಗಳು, ಎಂದರೆ ಮುಖ್ಯವಾಗಿ ಡಿಸ್ಟ್ರಿಕ್ಟ್ ಬೋರ್ಡುಗಳವರ ವಿಚಾರಣೆಯುಲ್ಲಿರತಕ್ಕ ರಸ್ತೆಗಳೂ, ಹಾಸನ ಅರಸೀಕೆರೆ ರಸ್ತೆಯೂ ಬಹು ಹೀನಸ್ಥಿತಿಗೆ ಇಳಿದುವು. ಆದರೂ ಈಚೆಗೆ ಹಾಸನ ಡಿಸ್ಟ್ರಿಕ್ಟಿನ ಮೆಲ್ನಾಡು ಪ್ರದೇಶಗಳಲ್ಲಿ ರಸ್ತೆ ರಿಪೇರಿ ಕೆಲಸವು ಉಪಕ್ರಮವಾಗಿ ಬಹಳ ಮಟ್ಟಿಗೆ ಉತ್ತಮವಾದ ಕೆಲಸವು ನಡೆದಿರುತ್ತದೆ. ಈ ಕೆಲಸವನ್ನು ಸಾಮಾನ್ಯವಾಗಿ ಬಿಡದೆ ನಡಿಸಿಕೊಂಡು ಬಂದು, ರಸ್ತೆಗಳನ್ನು ಸಾಧ್ಯವಾದಷ್ಟು ಉತ್ತಮ ಸ್ಥಿತಿಯಲ್ಲಿ ಇಡಲಾಗುವುದೆಂದು ನಂಬಿರುತ್ತೇವೆ.

ಈ ಸಮಯದಲ್ಲಿ ವಿಜ್ಞಾಪಿಸಬೇಕಾದ ಮತ್ತೊಂದು ವಿಷಯವೇನೆಂದರೆ.—ಶ್ರೀಮನ್ಮಹಾರಾಜರವರು ಅತ್ಯತಿಶಯವಾದ ಔದಾರ್ಯದಿಂದ ಇಂಪೀರಿಯಲ್ ವಾರ್ ಫಂಡಿಗೆ ಮಾಡಿದ ಸಹಾಯಕ್ಕಾಗಿ, ನಾನು ನಮ್ಮ ಜನಗಳ ಪರವಾಗಿ ನಮ್ಮ ಕೃತಜ್ಞತಾ ವಚನಗಳನ್ನು ವಿಜ್ಞಾಪಿಸಲು ಇಚ್ಛೆಯಿಸುತ್ತೇನೆ. ಅವರು ಮಾಡಿರುವ ಅಪರಿಮಿತ ದ್ರವ್ಯಸಹಾಯವೂ, ಆ ಸಹಾಯವನ್ನು ಮಾಡುವೆಂತೆ ಅವರಿಗೆ ಪ್ರೇರಣೆಯನ್ನುಂಟುಮಾಡಿದ ಉದಾರವಾದ ಮನೋಭಾವವೂ, ಈ ಸಂಸ್ಥಾನದ ಪಾಲನೆಯ ಭಾರವನ್ನು ವಹಿಸಿರುವ ವಿಖ್ಯಾತ ಮನೆತನದ ಕುಲಕ್ರಮಾಗತವಾದ ಔದಾರ್ಯಕ್ಕೆ ಚಿಹ್ನೆಯಾಗಿರುವುದೆಂಬದಾಗಿ ಚಿರಕಾಲ ಸ್ಮರಿಸಲ್ಪಡುವವು.

ಜೆ. ಜಿ. ಎಚ್. ಕ್ರಾಫರ್ಡ್,
ಪ್ರೆಸಿಡೆಂಟ್, ದಕ್ಷಿಣ ಮೈಸೂರು ಪ್ಲಾಂಟರುಗಳ ಸಂಘ.

III.

To

M. VISVESVARAYA, Esq., B.A., M.I.C.E., C.I.E.,
Dewan of Mysore.

Respected Sir,

Representatives, as we are, from the malnad taluk of Koppa and from the District Board, Kadur District, we beg to offer our respectful greetings to you on the occasion of your second sitting at this Assembly, as Dewan of our Premier State.

Peaceful as the whole world appeared to be, we are now confronted with the outbreak of War on the continent, and we join with the rest of the country in praying to the Almighty God for its successful and satisfactory termination at an early date.

Our State had already won the honor of being called a Model State and it only awaited your advent to count more laurels. Though it is but two years since you have adorned the position of Premier of this important State, the period is one of untiring energy, activity and enthusiasm. To you alone is due the credit of having roused the people of Mysore, from the dream-land of their contented stagnation by impressing on their minds the watch word 'wake up Mysore.' Your regime of the State, just in its beginning, is one of epoch-making in the constitution of Government. It is now for the first time that we see that the non-official public have been freely associated with the official body in all matters concerning the administration of the State.

The Economic Conference started by our August Ruler H. H. The Maharaja and fostered and enlarged under your special care, has been the source of enlightenment in matters of Education, Agriculture and Industries and Commerce and we are gratified to see that all these branches have, at their heads, eminent officers of ripe experience.

The Legislative Conference has been enlarged with a view to larger representations of public interest and the rights of interpellations and discussion of Budget Estimates have for the first time, been conceded.

The rules *re* the grant of loans for agricultural and industrial purposes have undergone revision.

Village Committees have been formed and village prosperity rules framed.

Last but not least, that long standing question, *viz.*, the de-population of malnad which was so vigorously agitated by Messrs. C. Srinivasa Rao and C. Vasudeva Rao, the life members of this Assembly, and to which the attention of the authorities was being constantly urged for, received a practical shape at your hands and the scheme has now commenced its work with committees formed for all the malnad areas. In tendering by means of this address our hearty and respectful thanks to you for this most needed step, we are acting as the mouthpiece of the multitude of your malnad population.

To crown all, we have the unique honor and privilege in that our beloved His Highness the Yuvaraja has been an active Member of Government, and while we all feel elated at this, we are also sure that, with wide experiences gained by visits to the various establishments and to several departments and institutions during His Highness' continental tour, the Province, as a whole, will have un-precedented advantages in many forms.

While repeating expressions of our loyalty and thankfulness, through you, to His Highness the Maharaja and to you for several reforms introduced, we beg to submit the following for consideration.

(*a*) Amelioration of the condition of the malnad is aptly and entirely the subject of local interest and consequently it is one that can rightly be incorporated with the District Board a well organised body. We therefore venture to suggest that it may be associated with that Department. On the District Board, there are at present, men representing malnad portions also and the funds allotted for the malnad improvement if added to the District Board, would place the latter on better resources; and the savings effected from the separate establishment charges may, well and more, be spent for the execution of works of utility. From our knowledge of things, we are apt to think and we have often heard it said that there are now more directing agencies than necessary and that what is wanted are executing agencies. In connection with this subject, we venture again to see your help in placing at our doors a court of ordinary civil jurisdiction with first class magisterial powers. The toils, worry, and expense incurred by parties in going to and from the courts at Chikmagalur at a distance of 60 miles, are very great, particularly in the monsoon when conveyances are not available and, this evil, we request, should be mitigated as much as possible and at an early date. To this end we would submit that the Munsiff's court with first class magisterial powers be revived at Yedahalli. This step would induce educated men of the malnad taking up legal or other profession and living there. The presence of a large number of educated men in the malnad would be one of the first steps to improve the malnad. Further we pray that the tramway may be extended from Koppa to Yedahalli.

(*b*) With regard to the deliberations of the Legislative Council now conducted and published in English only, we beg to request that you will be pleased to direct their being conducted in Kanarese also and proceedings published both in English and Kanarese, as is done in the cases of the Representative Assembly and the Economic Conference. We need not emphasise the fact that Kanarese is the vernacular and mother tongue of the country and that anything published in vernacular will directly appeal to the masses who, if at all, only know to read and write in Kanarese. The Legislative Council deliberations must reach the masses because it not only enacts laws and regulations for which interests of both the Government and the people are identically involved, but also it allows interpellations on the doings of the Government servants. As such the proceedings of the Council should be within the reach of even the meanest inhabitant. May we therefore venture to request that the proceedings of the Council should be conducted in Kanarese, as we believe, the Members of the Council including the President are well-versed in Kanarese.

(*c*) We request you to consider the advisability of further revising the rules *re* the agricultural loans by authorising the Village Committees to receive and investigate the applications from raiyats for loans and forwarding the same to the Amildar for disposal. The advantages now offered are not fully availed of by the malnad people; many of them illiterate, ignorant, and living in the innermost recesses as they are far from communications, are not aware of the facilities afforded to them and in cases where they are informed they keep back going to the offices as they are mortally afraid to approach the presiding officers. In such circumstances the modifications of the rules as above, would be more than welcome, more particularly as people would consider that those who form the Village Committees are one of them.

(*d*) One word more before concluding and that is about the Malnad Improvement. We are aware, Sir, that you realise the fact of depopulation of malnad being due chiefly to malaria. Scientific investigations by experts are being made and with regard to combating it, there is a divergence of opinion between several specialists. We understand that Italy has had a special treatment of the subject and that malaria has been successfully combated there. Several medical men have made Italy their ground for special study and we beg to urge the advisability of a specialist who has taken to researches and who has made, 'Malaria' a special study, may be indented for and deputed to study the situation in the malnad and to suggest remedies therefor.

In conclusion, Sir, we pray that you may be spared long enough to see the fulfilment of all your best hopes and anticipations.

We beg to remain,
Sir,
Your most obedient and humble servants,
H. KRISHNA RAO
and other Representative Assembly Members
of the Kadur District.

Translation of the above.

III.

ಮೈಸೂರು ಸಂಸ್ಥಾನದ ದಿವಾನರವರಾದ ಎಂ. ವಿಶ್ವೇಶ್ವರಯ್ಯ, ಎಸ್ಕ್ವೈರ್, ಬಿ. ಎ., ಎಂ. ಐ. ಸಿ. ಇ., ಸಿ. ಐ. ಇ. ಯವರ ಸನ್ನಿಧಾನಕ್ಕೆ.

ಮಹಾಸ್ವಾಮಿ,

ಮಲೆನಾಡು ಪ್ರದೇಶವಾದ ಕೊಪ್ಪ ತಾಲ್ಲೂಕಿನ ಮತ್ತು ಕಡೂರು ಡಿಸ್ಟ್ರಿಕ್ಟ್ ಬೋರ್ಡಿನ ಪ್ರತಿನಿಧಿಗಳಾದ ನಾವು, ಸಂಸ್ಥಾನಗಳಲ್ಲಿ ಮೊದಲಿನದೆನಿಸಿದ ನಮ್ಮ ಮೈಸೂರು ಸೀಮೆಯ ದಿವಾನರಾಗಿ ತಾವು ಈ ಸಭೆಯ ಅಧ್ಯಕ್ಷತೆಯನ್ನು ಎರಡನೆಯಸಾರಿ ಅಲಂಕರಿಸಿರುವ ಈ ಸಮಯದಲ್ಲಿ ತಮಗೆ ನಮ್ಮ ಅಭಿನಂದನಗಳನ್ನು ವಿನಯಪೂರ್ವಕವಾಗಿ ಸಮರ್ಪಿಸುತ್ತೇವೆ.

ಪ್ರಪಂಚವೆಲ್ಲಾ ಸಮಾಧಾನಸ್ಥಿತಿಯಲ್ಲಿರುವಂತೆ ತೋರುತ್ತಿದ್ದು ಈಗ ಯೂರೋಪ್ ಖಂಡದಲ್ಲಿ ಅಕಸ್ಮಾತ್ ಯುದ್ಧವು ಪ್ರಾಪ್ತವಾಗಿರುತ್ತದೆ. ಈ ಯುದ್ಧವು ನಮಗೆ ಜಯಲಾಭದಿಂದ ಅನುಕೂಲಿಸುವಂತೆ ಕ್ಷಿಪ್ರದಲ್ಲಿಯೇ ಪರ್ಯವಸಾನವನ್ನು ಹೊಂದಲಿ ಎಂದು ಸರ್ವ ಶಕ್ತನಾದ ಭಗವಂತನನ್ನು ಎಲ್ಲರೊಡನೆ ನಾವೂ ಪ್ರಾರ್ಥಿಸುತ್ತೇವೆ.

ನಮ್ಮ ಸಂಸ್ಥಾನಕ್ಕೆ ಮೊದರಿಯ ಸಂಸ್ಥಾನವೆಂಬ ಖ್ಯಾತಿಯು ಮೊದಲೇ ಬಂದಿರುತ್ತದೆ. ಅದಕ್ಕೆ ಇತೋಪ್ಯತಿಶಯವಾದ ಪ್ರಖ್ಯಾತಿಯು ಲಭಿಸುವುದಕ್ಕೆ ತಮ್ಮ ಆಗಮನವನ್ನೇ ನಿರೀಕ್ಷಿಸಲಾಗಿತ್ತು. ತಾವು ಈ ಸಂಸ್ಥಾನದ ಅಮಾತ್ಯಪದವನ್ನಲಂಕರಿಸಿ ಇನ್ನೂ ಎರಡು ವರ್ಷಗಳಾಗಿಲ್ಲವಾದರೂ ಇಷ್ಟು ಸ್ವಲ್ಪಕಾಲದಲ್ಲಿಯೇ ತಮ್ಮ ಅಶ್ರಾಂತವಾದ ಶಕ್ತಿಸಾಮರ್ಥ್ಯವೂ, ಚಟುವಟಿಕೆಯೂ, ಕಾರ್ಯೋತ್ಸಾಹವೂ ಪ್ರಕಾಶಕ್ಕೆ ಬಂದಿರುತ್ತವೆ. "ಮೈಸೂರು ದೇಶವೇ, ಪ್ರಬುದ್ಧವಾಗು" ಎಂಬ ಮಾತುಗಳನ್ನು ಮೈಸೂರು ಸಂಸ್ಥಾನದ

ಜನಗಳಿಗೆ ಮನಸ್ಸಿಗೆ ನಾಟುವಂತೆ ಹೇಳಿ, ಅಲ್ಪ ತೃಪ್ತಿಯಿಂದ ಅಲುಗಾಡದೆ ನಿದ್ರಾವಸ್ಥೆಯಲ್ಲಿದ್ದವರನ್ನು ಎಚ್ಚರಗೊಳಿಸಿ ಉದ್ಯೋಗಶೀಲರನ್ನಾಗಿ ಮಾಡಿದ ಕೀರ್ತಿಯು ತಮಗೆ ಸಲ್ಲತಕ್ಕದ್ದಾಗಿದೆ. ಈ ಸಂಸ್ಥಾನದ ದಿವಾನರಾಗಿ ತಾವು ಪದೆಮಾಡಿಸಿದ ಆರಂಭಕಾಲದಲ್ಲಿಯೇ ಈ ಸಂಸ್ಥಾನದ ರಾಜ್ಯಾಡಳಿತದ ಕ್ರಮದಲ್ಲಿ ಬಹು ಮುಖ್ಯವಾದ ಬದಲಾವಣೆಗಳನ್ನು ಮಾಡಿರುತ್ತೀರಿ. ಸರ್ಕಾರದ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯ ಗಳಲ್ಲಿಯೂ ಸರ್ಕಾರೀ ಆಫೀಸರುಗಳೊಡನೆ ಸರ್ಕಾರೀ ನೌಕರರಲ್ಲದ ಜನಗಳು ಧಾರಾಳವಾಗಿ ಸೇರಿ ಕೆಲಸ ಮಾಡುವುದಕ್ಕೆ ಇದೇ ಮೊದಲು.

ನಮ್ಮ ಮಹಾಪ್ರಭುಗಳಾದ ಶ್ರೀಮನ್ಮಹಾರಾಜ ರಾಜಾಸಾಹೇಬ್ಬಹಾದುರವರಿಂದ ಸ್ಥಾಪಿತವಾಗಿ ತಮ್ಮ ಪಾಲನೆಯಲ್ಲಿ ವೃದ್ಧಿ ಹೊಂದುತ್ತಿರುವ ಎಕನಾಮಿಕ್ ಕಾನ್‌ಫರೆನ್ಸ್ ಎಂಬುದು, ವಿದ್ಯಾಭ್ಯಾಸಕ್ಕೂ, ವ್ಯವಸಾಯಕ್ಕೂ, ಕೈಗಾರಿಕೆಗಳಿಗೂ, ವ್ಯಾಪಾರಕ್ಕೂ ಸಂಬಂಧಪಟ್ಟ ವಿಷಯಗಳಲ್ಲಿ ಜನಗಳಿಗೆ ಜ್ಞಾನೋದಯ ವಾಗುವುದಕ್ಕೆ ಆಕರವಾಗಿರುತ್ತದೆ. ಮತ್ತು ವಿದ್ಯಾಭ್ಯಾಸ ಮೊದಲಾದ ಈ ಎಲ್ಲಾ ಶಾಖೆಗಳಿಗೂ ಸಂಪೂರ್ಣ ವಾದ ಅನುಭವವುಳ್ಳ ಸಮರ್ಥರಾದ ಆಫೀಸರುಗಳು ಮೊಖ್ತೀಸರರಾಗಿರುವುದನ್ನು ನೋಡಿದರೆ ತುಂಬಾ ಸಂತೋಷವಾಗುತ್ತದೆ.

ನ್ಯಾಯವಿಧಾಯಕ ಸಭೆಯಲ್ಲಿ ಪ್ರಜೆಗಳ ಪರವಾಗಿ ಇನ್ನೂ ಹೆಚ್ಚು ಜನ ಮೆಂಬರುಗಳಿರುವಂತೆ ಮಾಡುವ ಉದ್ದೇಶದಿಂದ ಈ ಸಭೆಯನ್ನು ವಿಸ್ತರಿಸಿ, ಸರ್ಕಾರೀ ಆಫೀಸರುಗಳು ಮಾಡಿರುವ ಕಾರ್ಯಗಳನ್ನು ಕುರಿತು ಸಮಜಾಯಿಷಿ ಕೇಳುವ ಅಧಿಕಾರವನ್ನೂ ಬಡ್ಜೆಟ್ ಅಂದಾಜನ್ನು ಚರ್ಚಿಸುವ ಅಧಿಕಾರವನ್ನೂ ಆ ಸಭೆಗೆ ಇದೇ ಮೊಟ್ಟಮೊದಲು ಕೊಡೋಣವಾಗಿರುತ್ತದೆ.

ವ್ಯವಸಾಯ ಕಾರ್ಯಗಳಿಗಾಗಿಯೂ ಕೈಗಾರಿಕೆಯ ಕೆಲಸಗಳಿಗಾಗಿಯೂ ಕೊಡುವ ಸಾಲಗಳಿಗೆ ಸಂಬಂಧಪಟ್ಟ ನಿಬಂಧನೆಗಳನ್ನು ಪುನರ್ವಿಮರ್ಶೆ ಮಾಡಿ ಇದೆ.

ಗ್ರಾಮ ಕಮಿಟಿಗಳನ್ನು ಏರ್ಪಡಿಸಿ, ಗ್ರಾಮಗಳ ಅಭಿವೃದ್ಧಿಗೆ ಸಂಬಂಧಪಟ್ಟ ನಿಬಂಧನೆಗಳನ್ನು ತಯಾರುಮಾಡಿ ಇದೆ.

ಬಹು ಮುಖ್ಯವಾದ ಮತ್ತೊಂದು ವಿಷಯವು ಯಾವುದೆಂದರೆ, ಬಹುಕಾಲದಿಂದಲೂ ಈ ಸಭೆಯ ಮೆಂಬರುಗಳಾಗಿರುವ ಮಿ॥ ಸಿ. ಶ್ರೀನಿವಾಸರಾಯರೂ, ಮಿ॥ ಸಿ. ವಾಸುದೇವರಾಯರೂ ಸಹ ಬಹು ಉತ್ಸಾಹದಿಂದ ಚರ್ಚಿಸುತ್ತಿದ್ದಂಥಾ ಮತ್ತು ಸರ್ಕಾರದವರು ನಿಗಾ ಕೊಡಬೇಕೆಂದು ಪದೇಪದೇ ಅವರ ಅಮೂಲಾಹನೆಗೆ ತರುತ್ತಿದ್ದಂಥಾ ಮಲ್ನಾಡು ಸೀಮೆಯ ಪ್ರಜಾ ಕ್ಷೀಣತೆಗೆ ಸಂಬಂಧಪಟ್ಟ ವಿಷಯವು ಬಹುಕಾಲದಿಂದಲೂ ಚರ್ಚೆಯ ಲ್ಲಿದ್ದು ತಮ್ಮ ಕಾಲದಲ್ಲಿ ಕಾರ್ಯತಃ ನಡಸಲಾಗುವ ಸ್ಥಿತಿಗೆ ಬಂದು, ಮಲ್ನಾಡಿನ ಎಲ್ಲಾ ಪ್ರದೇಶಗಳಲ್ಲಿಯೂ ಕಮಿಟಿಗಳು ಏರ್ಪಟ್ಟು, ಕೆಲಸವು ಪ್ರಾರಂಭವಾಗಿರುತ್ತದೆ. ಈ ಅತ್ಯವಶ್ಯಕವಾದ ಏರ್ಪಾಟನ್ನು ಮಾಡಿದ್ದ ಕ್ಕಾಗಿ ನಮ್ಮ ಮನಃಪೂರ್ವಕವಾದ ವಂದನೆಗಳನ್ನು ಈ ಅಭಿನಂದನಪತ್ರಿಕೆಯ ಮೂಲಕ ಸಮರ್ಪಿಸುವುದ ರಲ್ಲಿ, ಮಲ್ನಾಡಿನ ಅಸಂಖ್ಯಾತವಾದ ಪ್ರಜೆಗಳ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ವಿಜ್ಞಾಪಿಸುತ್ತೇವೆ.

ಪ್ರಜಾಹಿತಕ್ಕೆ ಸಹಕಾರಿಗಳಾದ ಈ ಎಲ್ಲಾ ಏರ್ಪಾಟುಗಳಿಗೂ ಶಿಖರಪ್ರಾಯವಾದ ಮತ್ತೊಂದು ಮು ಖ್ಯಾಂಶವೇನೆಂದರೆ, ನಮ್ಮ ಶ್ರೀಮದ್ಯುವರಾಜರವರು ಸರ್ಕಾರದ ಪೆಂಬರಾಗಿ ರಾಜ್ಯಾಡಳಿತಕಾರ್ಯವನ್ನು ಪ್ರತ್ಯಕ್ಷವಾಗಿ ನಿಚಾರಮಾಡಲು ಪ್ರವರ್ತಿಸಿರುವುದರಿಂದ ನಮ್ಮಗಳಿಗೆಲ್ಲಾ ಅಪೂರ್ವವಾದ ಗೌರವವೂ ಘನತೆ ಯೂ ಉಂಟಾಗಿರುತ್ತವೆ. ಇದಕ್ಕಾಗಿ ನಾವುಗಳೆಲ್ಲಾ ವಿಶೇಷವಾಗಿ ಆನಂದ ಭರಿತರಾಗಿರುವೆವೆಲ್ಲದೆ, ಅಮಹನೀ ಯರು ಯೂರೊಪ್ ಖಂಡದಲ್ಲಿ ಸಂಚಾರಮಾಡಿ ಅಲ್ಲಿನ ನಾನಾ ವಿಧವಾದ ಏರ್ಪಾಟುಗಳನ್ನೂ ಇಲಾಖೆಗಳನ್ನೂ ಕಾರ್ಯಾಲಯಗಳನ್ನೂ ಪರಿಶೀಲನೆಮಾಡಿ ವಿಶಾಲವಾದ ಅನುಭವವನ್ನು ಪಡೆದುಕೊಂಡು ದಯಮಾಡಿಸಿರುವುದ ರಿಂದ, ಈ ನಮ್ಮ ಸಂಸ್ಥಾನಕ್ಕೆಲ್ಲಾ ನಾನಾವಿಧದಲ್ಲಿ ಅಭೂತಪೂರ್ವವಾದ ಪ್ರಯೋಜನಪರಂಪರೆಗಳುಂಟಾಗು ವುವೆಂದು ನಾವು ದೃಢವಾಗಿ ನಂಬಿರುತ್ತೇವೆ.

ನಮ್ಮ ಸಂಸ್ಥಾನದಲ್ಲಿ ನಾನಾ ಪ್ರಕಾರವಾದ ಪರಿಷ್ಕರಣ ಕಾರ್ಯಗಳನ್ನು ಆಚರಣೆಗೆ ತಂದಿರುವುದ ಕ್ಕಾಗಿ ನಮ್ಮ ರಾಜಭಕ್ತ್ಯಯನ್ನೂ ಕೃತಜ್ಞತೆಯನ್ನೂ ಸಹ ತಮ್ಮ ಮೂಲಕ ಶ್ರೀಮನ್ಮಹಾರಾಜರವರಿಗೂ ತಮ ಗೂ ಪುನಃ ವಿಜ್ಞಾಪಿಸುವುದಲ್ಲದೆ, ಈ ಕಳಗೆ ನಮೂದಿಸಿರುವ ಕೆಲವು ಅಂಶಗಳನ್ನು ಪರ್ಯಾಲೋಚನೆಯ ಬಗ್ಗೆ ಅರಿಕೆ ಮಾಡಿರುತ್ತೇವೆ.

(a) ಮಲ್ನಾಡು ಸೀಮೆಯನ್ನು ಅಭಿವೃದ್ಧಿಸ್ಥಿತಿಗೆ ತರುವ ವಿಷಯವು ಆಯಾಸ್ಥಳಕ್ಕೆ ಸಂಬಂಧಪಟ್ಟದ್ದಾ ದಕಾರಣ ಆಕೆಲಸವನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿಸುವುದು ನ್ಯಾಯವಾಗಿರುತ್ತದೆ. ಆದ್ದರಿಂದ ಈ ಕೆಲ

ಸವನ್ನು ಡಿಸ್ಟ್ರಿಕ್ಟ್ ಬೋರ್ಡ್ ಇಲಾಖೆಗೆ ಸೇರಿಸಬೇಕೆಂದು ಪ್ರಾರ್ಥಿಸುತ್ತೇವೆ. ಮಲ್ನಾಡು ಸೀಮೆಯ ಪ್ರತಿನಿಧಿಗಳು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿಯೂ ಮೆಂಬರುಗಳಾಗಿರುತ್ತಾರೆ. ಮಲ್ನಾಡಿನ ಅಭಿವೃದ್ಧಿಗಾಗಿ ನಿವಡ್ಡಾಯಿಸಿಟ್ಟ ಹಣವನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿಸಿದರೆ ಅದರ ದ್ರವ್ಯಾನುಕೂಲತೆಯನ್ನು ಹೆಚ್ಚಿಸಿದಂತೆ ಆಗುತ್ತದೆ.

ಇದಕ್ಕಾಗಿ ಇಟ್ಟಿರುವ ಪ್ರತ್ಯೇಕ ಶಿಬ್ಬಂದಿಗೆ ಖರ್ಚಾಗುವ ಹಣವು ಉಳಿಯುವುದರಿಂದ ಆ ಹಣವನ್ನು ಉಪಯುಕ್ತವಾದ ಕಾರ್ಯಗಳಿಗಾಗಿ ವಿನಿಯೋಗಿಸಿದರೆ ವಿಶೇಷಪ್ರಯೋಜನವುಂಟು. ನಮಗೆ ತಿಳಿದಿರುವ ಮಟ್ಟಿಗೂ, ಅನೇಕವೇಳೆ ಕೇಳಿರುವಮಟ್ಟಿಗೂ ಹುಕುಂಮೊಡುವಕೆಲಸಕ್ಕೆ ಎಷ್ಟು ಜನಗಳು ಅವಶ್ಯಕವೋ ಅದಕ್ಕಿಂತಲೂ ಹೆಚ್ಚು ಮೊಡಿ ಇದ್ದಾರೆಂದು ತೋರುತ್ತದೆ. ಈಗ ಬೇಕಾಗಿರುವುದು ಹುಕುಂ ಮಾಡತಕ್ಕ ಜನಗಳಲ್ಲ, ಮೊಡಿದಹುಕುಮನ್ನು ಜಾರಿಯಲ್ಲಿ ತರತಕ್ಕ ಜನಗಳು. ಈ ಸಂದರ್ಭದಲ್ಲಿ ಸಾಮಾನ್ಯವಾದ ಸಿವಿಲ್ ಅಧಿಕಾರವೂ ಒಂದನೆಯ ತರಗತಿಯ ಮ್ಯಾಜಿಸ್ಟ್ರೇಟರ ಅಧಿಕಾರವೂ ಉಳ್ಳ ಒಂದು ಕೋರ್ಟನ್ನು ನಮಗೆ ಸಮೀಪ ಸ್ಥಳದಲ್ಲಿಟ್ಟುಕೊಡಬೇಕೆಂದು ಪುನಃ ಬೇಡುತ್ತೇವೆ. ಅರವತ್ತು ಮೈಲಿಗಳ ಫಾಸಲೆಯುಳ್ಳ ಚಿಕ್ಕಮಗಳೂರಿನಲ್ಲಿಟ್ಟಿರುವ ಕೋರ್ಟಿಗೆ ಕಕ್ಷಿಗಾರರು ಹೋಗಿಬರುವಶ್ರಮವೂ, ಕಷ್ಟವೂ, ದುಡ್ಡಿನ ಖರ್ಚೂ ಬಹಳವಾಗಿವೆ. ತತ್ಕಾಪಿ, ಮಳೆಗಾಲದಲ್ಲಿ ಗಾಡಿಗಳು ಸಿಕ್ಕುವುದಿಲ್ಲವಾದ್ದರಿಂದ ಈ ಕಷ್ಟವು ಇನ್ನೂ ಹೆಚ್ಚಾಗುತ್ತದೆ. ಈ ಕಷ್ಟವನ್ನು ಅತಿ ಕ್ಷಿಪ್ರವಲ್ಲಿಯೇ ಸಾಧ್ಯವಾವ ಮಟ್ಟಿಗೂ ಕಡಿಮೆಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇವೆ. ಈ ಉದ್ದೇಶಾರ್ಥವಾಗಿ ಎಡೆಹಳ್ಳಿಯಲ್ಲಿ ಒಂದನೆಯ ತರಗತಿಯ ಮ್ಯಾಜಿಸ್ಟ್ರೇಟರ ಅಧಿಕಾರ ನಿಶಿ ಮುನ್ಸಿಫ್ ಕೋರ್ಟನ್ನು ಪುನಃ ಇಡಿಸಿ ಕೊಡಬೇಕಾಗಿ ಬೇಡುತ್ತೇವೆ. ಹೀಗೆ ಮಾಡಿದರೆ, ವಿದ್ಯಾವಂತರಾದ ಮಲ್ನಾಡಿನ ಜನಗಳು ಲಾಯರ ಕಸಬನ್ನಾಗಲೀ ಇನ್ನಾವುದಾದರೂ ಕಸಬನ್ನಾಗಲೀ ಅವಲಂಬಿಸಿಕೊಂಡು ಅಲ್ಲಿ ವಾಸಮಾಡಲು ಪ್ರೋತ್ಸಾಹವುಂಟಾಗುತ್ತದೆ. ವಿದ್ಯಾವಂತರಾದ ಅನೇಕ ಜನಗಳು ಮಲ್ನಾಡಿನಲ್ಲಿ ವಾಸಮೊಡುವಂತೆ ಪ್ರೋತ್ಸಾಹಿಸುವುದೇ ಮಲ್ನಾಡನ್ನು ಅಭಿವೃದ್ಧಿಗೆ ತರುವುದಕ್ಕೆ ಪ್ರಥಮ ಸೋಪಾನವಾಗಿರುತ್ತದೆ. ಇದೂಅಲ್ಲದೆ, ಟ್ರಾಂವೆಯನ್ನು ಎಡೆಹಳ್ಳಿಯಿಂದ ಕೊಪ್ಪಕ್ಕೆ ಹಾಕಿಸಬೇಕು.

(b) ನ್ಯಾಯವಿಧಾಯಕ ಸಭೆಯಲ್ಲಿ ನಡೆಯುವ ಚರ್ಚೆಗಳನ್ನು ಇಂಗ್ಲಿಷಿನಲ್ಲಿ ಮಾತ್ರವೇ ನಡಿಸಿ ಫಾಯಿಸ್ ಮಾಡುತ್ತಾ ಇರುವುದರಿಂದ, ಇನ್ನು ಮುಂದೆ ಹಾಗೆಮಾಡದೆ, ಪ್ರಜಾಪ್ರತಿನಿಧಿ ಸಭೆಯಲ್ಲಿಯೂ ಎಕನಾಮಿಕ್ ಕಾನ್ಫರೆನ್ಸಿನಲ್ಲಿಯೂ ನಡಿಸುತ್ತಿರುವಂತೆ ನ್ಯಾಯವಿಧಾಯಕ ಸಭೆಯ ಚರ್ಚೆಗಳನ್ನೂ ಸಹ ಕನ್ನಡದಲ್ಲಿಯೇನಡಿಸಿ ಆದರ ನಡೆವಳಿಕೆಗಳನ್ನು ಇಂಗ್ಲೀಷ್ ಮತ್ತು ಕನ್ನಡ ಎರಡು ಭಾಷೆಗಳಲ್ಲಿಯೂ ಫಾಯಿಷ್ ಮಾಡುವಂತೆ ಏರ್ಪಾಟು ಮಾಡಬೇಕಾಗಿ ಪ್ರಾರ್ಥಿಸುತ್ತೇವೆ. ಕನ್ನಡವೇ ಈ ಸಂಸ್ಥಾನದ ದೇಶಭಾಷೆಯೂ ಮಾತೃಭಾಷೆಯೂ ಆಗಿರುತ್ತದೆಯೆಂಬ ಅಂಶವನ್ನು ಹೆಚ್ಚಾಗಿ ಒತ್ತಿಹೇಳಬೇಕಾದದ್ದಿಲ್ಲ.

ಸಾಮಾನ್ಯವಾಗಿ ಜನಗಳಿಗೆ ಓದುಬರೆಹವೇ ತಿಳಿಯದು; ಬಂದುವೇಳೆ ತಿಳಿದರೂ ಕನ್ನಡದಲ್ಲಿ ಓದುವುದಕ್ಕೂ ಬರೆಯುವುದಕ್ಕೂ ಮಾತ್ರ ಬರುವುದರಿಂದ ಆ ಭಾಷೆಯಲ್ಲಿ ಪ್ರಕಟಿಸಲ್ಪಟ್ಟ ವಿಷಯವು ಸುಲಭವಾಗಿ ಅವರಮನಸ್ಸಿಗೆ ಹತ್ತುತ್ತದೆ.

ನ್ಯಾಯ ವಿಧಾಯಕ ಸಭೆಯಲ್ಲಿ, ಸರ್ಕಾರದವರ ಮತ್ತೂ ಪ್ರಜೆಗಳ ಕ್ಷೇಮಚಿಂತನೆಗೆ ಏಕರೀತಿಯಾಗಿ ಆವಶ್ಯಕವಾಗಿರುವಂಥಾ ಕಾನೂನುಗಳೂ ರೆಗ್ಯುಲೇಷನುಗಳೂ ವಿಧಿಸಲ್ಪಡುತ್ತವೆ ಯಲ್ಲದೆ ಸರ್ಕಾರೀ ನೌಕರರು ನಡಿಸುವ ಕಾರ್ಯಗಳನ್ನು ಕುರಿತು ಸಮಜಾಯಿಷಿಕೇಳುವ ಅಧಿಕಾರವೂ ಸಹ ಆ ಸಭೆಗೆಇರುವುದರಿಂದ, ಆ ಸಭೆಯಲ್ಲಿ ನಡೆಯುವ ಚರ್ಚೆಗಳು ಸಾಮಾನ್ಯ ಜನಗಳಿಗೂ ತಿಳಿಯಲೇಬೇಕು. ಆದಕಾರಣ ಆಸಭೆಯ ನಡೆವಳಿಕೆಗಳು ಕೇವಲ ದೀನನಾದ ಮನುಷ್ಯನಿಗೂ ತಿಳಿಯುವಹಾಗೆ ಇರಬೇಕು. ಆದಪ್ರಯುಕ್ತ, ಈ ಸಭೆಯ ಮೆಂಬರುಗಳಿಗೂ ಅಧ್ಯಕ್ಷರಿಗೂ ಕನ್ನಡವು ಚೆನ್ನಾಗಿ ತಿಳಿಯುವುದರಿಂದ ಅದರ ನಡೆವಳಿಕೆಗಳನ್ನು ಕನ್ನಡ ಭಾಷೆಯಲ್ಲಿಯೇ ನಡಿಸಬೇಕೆಂದು ಪ್ರಾರ್ಥಿಸುತ್ತೇವೆ.

(c) ವೈವಸಾಯ ಕಾರ್ಯಗಳಿಗೋಸ್ಕರ ಸಾಲಕ್ಕಾಗಿ ರೈತರಿಂದ ಬರುವ ಅರ್ಜಿಗಳನ್ನು ಹಿಡಿದು ಅವುಗಳನ್ನು ಕುರಿತು ವಿಚಾರಮೊಡಿ, ಅನಂತರ ಫೈಸಲ್‌ಬಗ್ಗೆ ಅಮಲ್ದಾರರಿಗೆ ಕಳುಹಿಸುವ ಅಧಿಕಾರವನ್ನು ಗ್ರಾಮೀಣ ಕಮಿಟಿಗಳಿಗೆ ಕೊಡುವುದರಮೂಲಕ ಸದರಿ ಸಾಲದ ನಿಬಂಧನೆಗಳನ್ನು ಪುನರ್ವಿಮರ್ಶೆ ಮಾಡುವುದು ಯುಕ್ತವೆಂಬ ವಿಚಾರವನ್ನು ತಾವು ಆಲೋಚನೆಗೆ ತೆಗೆದುಕೊಳ್ಳಬೇಕು. ಸರ್ಕಾರದವರು ರೈತರಿಗೆ ಕೊಟ್ಟಿರುವ ಅನುಕೂಲತೆಗಳನ್ನು ಮಲ್ನಾಡಿನ ರೈತರು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುತ್ತಾ ಇಲ್ಲ. ಅನೇಕರು ಅಕ್ಷರಸ್ಥರಲ್ಲ; ಏನೂ ತಿಳಿಯದವರು; ಅಭುಕ್ತವಾದ ಮೂಲೆಗಳಲ್ಲಿ ವಾಸಮಾಡುತ್ತಾರೆ.

ಸಂಚಾರ ಸಮೋಚ್ಚಾರ ಸಾಧನಗಳಿಗೆ ಬಹುದೂರವಾಗಿ ವಾಸಮೊಡುವುದರಿಂದ, ಸರ್ಕಾರದವರು ಅವರಿಗೆ ಕೊಟ್ಟಿರುವ ಅನುಕೂಲತೆಗಳು ಅವರಿಗೆ ಗೊತ್ತೇ ಇಲ್ಲ. ಬಂದುವೇಳೆ ಅವರಿಗೆ ಯಾರಾದರೂ ತಿಳಿಸಿದರೂ ಕೂಡ, ಆಫೀಸರರ ಎದುರಿಗೆ ಹೋಗುವುದಕ್ಕೆ ಭಯಪಟ್ಟು ಹೋಗದೆ ನಿಂತುಬಿಡುತ್ತಾರೆ. ಇಂಥಾ ಸಂದರ್ಭಗಳಲ್ಲಿ, ಮೇಲೆ ಸೂಚಿಸಿರುವ ಮೇರಗೆ ನಿಬಂಧನೆಗಳನ್ನು ಬದಲಾಯಿಸುವುದು ಎಲ್ಲರಿಗೂ ಅಭಿಮತವಾಗಿರುತ್ತದೆ. ತತ್ಪಾಪಿ, ಗ್ರಾಮ ಕಮಿಟಿಗಳಲ್ಲಿರುವ ಜನಗಳು ಅವರ ಪೈಕಿ ಇರುವ ಜನಗಳೇ ಆದ್ದರಿಂದ ಈ ಬದಲಾವಣೆಯು ಇನ್ನೂ ಹೆಚ್ಚು ಅಭಿಮತವಾಗಿರುತ್ತದೆ.

(d) ಈ ಅಭಿನಂದನ ಪತ್ರಿಕೆಯನ್ನು ಸಂಪೂರ್ತಿ ಮಾಡುವುದಕ್ಕೆ ಮುಂಚೆ ಮಲ್ನಾಡಿನ ಅಭಿವೃದ್ಧಿಯ ವಿಷಯವಾಗಿ ಬಂದು ಮಾತನ್ನು ಹೇಳಬೇಕಾಗಿದೆ. ಮಲ್ನಾಡಿನಲ್ಲಿ ಪ್ರಜಾಸಂಖ್ಯೆಯು ಕಡಿಮೆಯಾಗುತ್ತಿರುವುದಕ್ಕೆ ಮುಖ್ಯವಾಗಿ ಮಲೇರಿಯಾ ಜಾಡ್ಯವೇ ಕಾರಣವೆಂಬುದಾಗಿ ತಾವು ತಿಳಿದುಕೊಂಡಿರುತ್ತೀರೆಂದು ನಮಗೂ ಗೊತ್ತಿದೆ. ಶಾಸ್ತ್ರಜ್ಞರಾದ ನಿಪುಣರು ಈ ಜಾಡ್ಯದ ವಿಷಯದಲ್ಲಿ ಶಾಸ್ತ್ರೀಯವಾಗಿ ವಿಚಾರ ಮಾಡುತ್ತಾ ಇದ್ದಾರೆ. ಅದಕ್ಕೆ ತಕ್ಕ ಪ್ರತಿಕ್ರಿಯೆ ಮಾಡುವ ವಿಷಯದಲ್ಲಿ ಅನೇಕಮಂದಿ ಶಾಸ್ತ್ರಜ್ಞರು ಅನೇಕ ವಿಧವಾಗಿ ಅಭಿಪ್ರಾಯ ಪಡುತ್ತಾರೆ. ಇಟಲಿ ದೇಶದಲ್ಲಿ ಈ ಜಾಡ್ಯಕ್ಕೆ ಒಂದು ವಿಧವಾದ ವಿಶೇಷ ಚಿಕಿತ್ಸೆ ಇರುವುದೆಂತಲೂ, ಮಲೇರಿಯ ಜಾಡ್ಯಕ್ಕಾಗಿ ಅಲ್ಲಿ ಮಾಡುವ ಚಿಕಿತ್ಸೆಯು ಫಲಕಾರಿಯಾಗಿದೆಯೆಂತಲೂ ತಿಳಿಯಬರುತ್ತದೆ. ವೈದ್ಯಶಾಸ್ತ್ರಜ್ಞರೇಕರು ಈ ವಿಷಯವನ್ನು ಪರಿಶೀಲನೆಮಾಡಿ ತಿಳಿದುಕೊಳ್ಳಬೇಕಾದರೆ ಇಟಲಿ ದೇಶಕ್ಕೆ ಹೋಗುತ್ತಾರೆ. ಆದಕಾರಣ, ಮುಖ್ಯವಾಗಿ ಮಲೇರಿಯಾ ಜಾಡ್ಯದ ವಿಷಯವನ್ನೇ ಚೆನ್ನಾಗಿ ಪರಿಶೋಧನೆಮಾಡಿ ತಿಳಿದುಕೊಂಡಿರುವಂಥಾ ಒಬ್ಬ ಶಾಸ್ತ್ರಜ್ಞನಾದ ನಿಪುಣನನ್ನು ಕರೆಯಿಸಿ, ಮಲ್ನಾಡಿನ ಸ್ಥಿತಿಯನ್ನು ಪರಿಶೀಲನೆಮಾಡಿ ನೋಡಿ ಅದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಸೂಚಿಸುವುದಕ್ಕಾಗಿ ಆತನನ್ನು ನೇಮಿಸಬೇಕೆಂದು ಬೇಡುತ್ತೇವೆ.

ತಮ್ಮ ಎಲ್ಲಾ ಘನವಾದ ಉದ್ದೇಶಗಳೂ ಮನೋರಥಗಳೂ ಸಂಪೂರ್ಣವಾಗಿ ನೆರವೇರಿದುದನ್ನು ಕಂಡು ಆನಂದಿಸುವಂತೆ ಭಗವಂತನು ತಮಗೆ ದೀರ್ಘಾಯುವನ್ನು ಕರುಣಿಸಬೇಕೆಂಬುದಾಗಿ ನಾವು ಪ್ರಾರ್ಥಿಸುತ್ತೇವೆ, ಮಹಾಸ್ವಾಮಿ.

ತಮ್ಮ ವಿಧೇಯರಾದ
ಎಚ್. ಕೃಷ್ಣ ರಾವ್.
ಪ್ರಜಾಪ್ರತಿನಿಧಿ ಮೆಂಬರ್ ಕಡೂರು ಡಿ|| ಬೋರ್ಡ್
ಮತ್ತು ಕಡೂರು ಡಿಸ್ಟ್ರಿಕ್ಟಿನ ಇತರ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು.

IV.

To

M. VISVESVARAYA, Esq., C.I.E.,
Dewan of Mysore.

Respected Sir,

On behalf of the Vokkaligara Sangha and the Vokkaligara community of the Mysore State, I beg to offer my hearty congratulations on the record of another year's successful administration of the State that you have been able to place before the Assembly. It is a matter of great satisfaction that during the year there has been no failure of crops, that the health of the people has been maintained and that the year's revenues are up to the mark, while a number of progressive measures have been initiated and the Government is in a high state of efficiency.

The introduction of Compulsory Education marks an epoch in the annals of Mysore. We believe that it will soon result in great strides being taken in the education and enlightenment of the people and lead to the better appreciation and utilisation of the benefits accruing from all other progressive reforms that are, and may be, initiated in the State.

We are deeply grateful to His Highness the Maharaja of Mysore for granting, through your advice, the privilege of the election of more non-official members to the Legislative Council and to the Economic Conference and also for giving the powers of interpellation to the Legislative Body. The evidence of His Highness' anxiety and eagerness to associate the people with the Government has touched their hearts, and they highly value and appreciate the honor thus conferred on them for which they will remain ever grateful. There is no doubt that as a result of these beneficial reforms a cordiality will be established between the Government and the governed, resulting in mutual benefits that will promote the growth and prosperity of our beloved State.

Nothing gives us more pleasure and greater confidence, however, than the association in the direct administration of the State of His Highness the Yuvaraja of Mysore who has been graciously pleased to accept the responsible position of Councillor to the Government of His Highness the Maharaja of Mysore. His Highness has travelled widely both in the East and in the West and combines with an unique experience extraordinary energy and enthusiasm for work in the interests of the State and the people. His Highness has already evinced such deep and abiding interest in the welfare of the many public and charitable institutions in the country and such keenness and readiness to assist in any public function where his help would be of so much moral and material benefit that his popularity is universal and unbounded, and we are indeed fortunate that His Highness has been pleased to give his valuable services in the cause of the people whom he loves and who deeply love him.

The Vokkaligara community is, as you are aware, a great economic factor in the State, and we are confident that its interests will have your warmest sympathy and that its representations will receive your cordial consideration. We beg to assure you, therefore, that we shall loyally co-operate in the working of all the beneficent measures which you are introducing for the good of the State, and we pray that in order to render this co-operation more effective, you will be pleased to allow two members to be elected to the Economic Conference and one to the Legislative Council from the Vokkaligara Sangha. This favour will add to the many we have received from you as well as from the Government and will be cherished with everlasting gratitude by our vast community.

We beg you to kindly express our assurances of deep attachment and loyalty to His Highness the Maharaja of Mysore and to His Highness the Yuvaraja of Mysore, the illustrious patrons of our Sangha, who have shewn so much paternal interest in its welfare and in the amelioration of the people it represents.

In conclusion, we beg to express to yourself our heartfelt gratitude for the many liberal and progressive measures you have introduced and are contemplating to introduce into the State with a view to bring it on a level with the best governed and most enlightened countries of the world. Your kindly advice delivered to us in such high-minded and eloquent terms on many a public occasion has not only served to keep green in our memories the great responsibility that rests upon us as individuals that help the progress of the country but has also infused into us feelings of great respect, regard and gratitude for all that you have been doing for the elevation of the people of the State.

May the Almighty in His mercy give you health, strength and energy to carry on the mighty work that now devolves upon you is our fervent prayer.

We beg to remain,
Respected Sir,
Your most obedient and humble servants,
PUTTEGOWDA
and other members of the Vokkaligara Sangha.

Translation of the above.

IV.

ಮೈಸೂರು ದಿವಾನರವರಾದ ಎಮ್. ವಿಶ್ವೇಶ್ವರಯ್ಯ, ಎಸ್ಕ್ವೈರ್, ಸಿ. ಐ. ಇ. ಯವರಿಗೆ.

ಮಹಾಸ್ವಾಮಿ,

ಈ ಸಂಸ್ಥಾನದ ರಾಜಕೀಯವಾದ ಆಡಳಿತವನ್ನು ಮತ್ತೊಂದು ಸಂವತ್ಸರದ ವರೆಗೆ ತಾವು ಸಮರ್ಥತೆಯಿಂದ ನಿರ್ವಹಿಸಿ, ಅವನ್ನು ಪ್ರತಿನಿಧಿ ಸಭೆಯವರಿಗೆ ತಿಳಿಯಪಡಿಸಿದ್ದಕ್ಕೋಸ್ಕರ, ಒಕ್ಕಲಿಗರ ಸಂಘದ ಪರವಾಗಿಯೂ ಸಂಸ್ಥಾನದಲ್ಲಿರುವ ಒಕ್ಕಲಿಗ ಜನಗಳ ಪರವಾಗಿಯೂ, ನಾನು ನನ್ನ ಮನಃಪೂರ್ವಕವಾದ ಅಭಿನಂದನಗಳನ್ನು ಸಮರ್ಪಿಸುತ್ತೇನೆ. ಕಳೆದ ವರ್ಷದಲ್ಲಿ ಮಳೆ ಬೆಳೆ ಕೆಡದೆ, ಜನಗಳು ಆರೋಗ್ಯವುಳ್ಳವರಾಗಿದ್ದುಕೊಂಡು, ಸೀಮೆಯು ಆದಾಯವೂ ಎಂದಿನಂತೆ ತಕ್ಕಮಟ್ಟಿಗೆ ಆಗಿ, ಅನೇಕ ಪುರೋವೈದ್ಧಿಯ ಏರ್ಪಾಡುಗಳು ಉಪಕ್ರಮಿಸಲ್ಪಟ್ಟು, ಸರ್ಕಾರವು ವಿಶೇಷವಾಗಿ ಕಾರ್ಯನಿರ್ವಾಹ ಶಕ್ತಿಯನ್ನು ಪಡೆದಿರುವುದು ಬಹು ತೃಪ್ತಿಕರವಾದ ಅಂಶವಾಗಿದೆ.

ನಿರ್ಬಂಧ ವಿದ್ಯಾಭ್ಯಾಸವನ್ನು ಆಚರಣೆಗೆ ತಂದದ್ದು ಮೈಸೂರು ದೇಶದ ಚರಿತ್ರೆಯಲ್ಲಿ ಬಹು ಮುಖ್ಯವಾದ ಸಂಗತಿಯಾಗಿರುವದು. ಇದರಿಂದ ಜನರ ವಿದ್ಯಾವ್ಯಾಸಂಗವೂ ನಾಗರಿಕತೆಯೂ ಬಹಳವಾಗಿ ಹೆಚ್ಚುವೆಲ್ಲದೆ, ಸಂಸ್ಥಾನದಲ್ಲಿ ಇಪುವರೆಗೆ ಉಪಕ್ರಮಿಸಿರುವ ಮತ್ತು ಮುಂದೆ ಉಪಕ್ರಮಿಸಬಹುದಾಗಿರುವ ಇತರ ಸಕಲ ಪುರೋವೈದ್ಧಿ ಕಾರ್ಯಗಳಿಂದ ಉಂಟಾಗುವ ಪ್ರಯೋಜನಗಳನ್ನು ಜನರು ಇನ್ನೂ ಚೆನ್ನಾಗಿ ತಿಳಿದುಕೊಂಡು ಸ್ವಂತಕ್ಕೆ ಉಪಯೋಗಿಸಿಕೊಳ್ಳುವದಕ್ಕೆ ಅವಕಾಶ ವುಂಟಾಗುವದು.

ನ್ಯಾಯವಿಧಾಯಕ ಸಭೆಗೂ ಎಕನಾಮಿಕ್ ಕಾನ್ಫರೆನ್ಸಿಗೂ ಸರ್ಕಾರೀ ಉದ್ಯೋಗಸ್ಥರಲ್ಲದ ಮೆಂಬರುಗಳನ್ನು ಹೆಚ್ಚಾಗಿ ಚುನಾಯಿಸತಕ್ಕ ಅಧಿಕಾರವನ್ನೂ, ನ್ಯಾಯವಿಧಾಯಕ ಸಭೆಯು ಮೆಂಬರುಗಳಿಗೆ ರಾಜ್ಯಾಡಳಿತದ ವಿಷಯದಲ್ಲಿ ಸಂಜ್ಞಾಯಿಷಿ ಕೇಳುವ ಅಧಿಕಾರವನ್ನೂ, ತಮ್ಮ ಮಂತ್ರಾಲೋಚನೆಯ ಮೂಲಕ ನಮಗೆಳಿಗೆ ದಯಪಾಲಿಸಿಕೊಟ್ಟಿರುವದಕ್ಕೋಸ್ಕರ ಮೈಸೂರು ಶ್ರೀಮನ್ಮಹಾರಾಜ ರಾಜಸಾಹೇಬ್ಬಹಾದುರವರಿಗೆ ನಾವು ಕೇವಲ ಕೃತಜ್ಞರಾಗಿದ್ದೇವೆ. ರಾಜ್ಯದ ಆಡಳಿತದಲ್ಲಿ ಜನರನ್ನು ಭಾಗಿಗಳನ್ನಾಗಿ ಮಾಡಿಕೊಳ್ಳಬೇಕೆಂದಿರುವ ಶ್ರೀಮನ್ಮಹಾರಾಜರವರ ಆದರಕ್ಕೂ ಔತ್ಸುಕ್ಯಕ್ಕೂ ಸೂಚಕವಾದ ಈ ನಿದರ್ಶನದಿಂದ ಪ್ರಜೆಗಳ ಹೃದಯವು ಕರಗಿ, ಅವರು ತಮಗೆ ದಯಪಾಲಿಸಿರುವ ಗೌರವವನ್ನು ಅಮೂಲ್ಯವಾದದ್ದನ್ನಾಗಿ ಭಾವಿಸಿ ಶ್ಲಾಘಿಸುವರಲ್ಲದೆ, ಎಂದೆಂದಿಗೂ ಕೃತಜ್ಞರಾಗಿರುವರು. ಇಂಥಾ ಪ್ರಯೋಜನಕರಗಳಾದ ಬದಲಾವಣೆಗಳಿಂದ ಪಾಲಕರಿಗೂ ಪ್ರಜೆಗಳಿಗೂ ಪರಸ್ಪರಾನುರಾಗವು ಪ್ರತಿಷ್ಠಿತವಾಗಿ ಉಭಯ ಪಕ್ಷದವರೂ ಪ್ರಯೋಜನಗಳನ್ನು ಪಡೆದುಕೊಳ್ಳಲವಕಾಶವುಂಟಾಗುವೆದೆರಿಂದ, ನಮ್ಮ ಸಂಸ್ಥಾನವು ಅಭಿವೃದ್ಧಿಯನ್ನು ಪಡೆದು ಉಚ್ಚಾವಸ್ಥಿತಿಗೆ ಬರುವದರಲ್ಲಿ ಯಾವ ಸಂದೇಹವೂ ಇಲ್ಲ.

ಮೈಸೂರು ಶ್ರೀಮದ್ಯುವರಾಜರವರು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದಲ್ಲಿ ಉನ್ನತವಾದ ಕೌನ್ಸಿಲರ್ ಪದವಿಯನ್ನು ಉದಾರಬುದ್ಧಿಯಿಂದ ಸ್ವೀಕರಿಸಿ ತನ್ಮೂಲಕ ಸಂಸ್ಥಾನದ ಆಡಳಿತದಲ್ಲಿ ಪ್ರತ್ಯಕ್ಷ ಸಹಕಾರಿಗಳಾಗಿರುವದು ಮತ್ತೆಲ್ಲಕ್ಕಿಂತಲೂ ನಮಗೆ ಹೆಚ್ಚಾದ ಸಂತೋಷವನ್ನೂ ದೃಢವಿಶ್ವಾಸವನ್ನೂ ಉಂಟುಮಾಡಿರುತ್ತದೆ. ಶ್ರೀಮದ್ಯುವರಾಜರವರು ಪಾಶ್ಚಾತ್ಯದೇಶಗಳಲ್ಲಿಯೂ ಪಾಶ್ಚಿಮಾತ್ಯ ದೇಶಗಳಲ್ಲಿಯೂ ಬಹುದೂರ ಸಂಚಾರಮಾಡಿ, ತಮ್ಮ ಅದ್ವಿತೀಯವಾದ ಅನುಭವದ ಜೊತೆಗೆ ದೇಶೋನ್ನತಿಗೂ ಪ್ರಜಾಹಿತಕ್ಕೂ ಮಾಡಬೇಕಾದ ಕಾರ್ಯಗಳಲ್ಲಿ ಅತಿಶಯವಾದ ನಿರ್ವಾಹಶಕ್ತಿಯನ್ನೂ ಉತ್ಸಾಹವನ್ನೂ ಪಡೆದಿರುತ್ತಾರೆ. ಅವರು ದೇಶದಲ್ಲಿರುವ ಅನೇಕ ಸಾರ್ವಜನೀನ ಸಂಘೆಗಳ ಮತ್ತು ಧರ್ಮಾಲಯಗಳ ಅಭ್ಯುದಯವಿಷಯದಲ್ಲಿ ಅತಿಶಯವೂ ಚಿರಸ್ಥಾಯಿಯೂ ಆದ ಆದರವನ್ನೂ, ತಮ್ಮ ಸಹಾಯದಿಂದ ಜನಗಳ ಸುಶೀಲತೆಗೂ ಸಂಪದಭ್ಯುದಯಕ್ಕೂ ಪ್ರಯೋಜನವುಂಟಿಂದು ಕಾಣಬರುವ ಸಕಲ ಸಾರ್ವಜನೀನ ಪ್ರಯತ್ನಗಳಲ್ಲಿ ಸೂಕ್ಷ್ಮಬುದ್ಧಿಯನ್ನೂ ಸಹಾಯಸಿದ್ಧತೆಯನ್ನೂ ತೋರ್ಪಡಿಸಿರುತ್ತಾರೆ. ಇದರಿಂದ ಅವರಲ್ಲಿ ಪ್ರಜೆಗಳಿಗೆ ಸಾರ್ವತ್ರಿಕವೂ ಅಪಾರವೂ ಆದ ವಿಶ್ವಾಸ ವುಂಟಾಗಿರುತ್ತೆ. ಅವರು ಯಾರಲ್ಲಿ ತಮಗೆ ಅನುರಾಗವಿರುವದೋ ಮತ್ತು ಯಾರು ತಮ್ಮಲ್ಲಿ ಅಗಾಧವಾದ ಅನುರಾಗವನ್ನು ವಹಿಸಿರುವರೋ ಅಂಥಾ ಪ್ರಜೆಗಳ ಪ್ರಯೋಜನಾರ್ಥವಾಗಿ ತಮ್ಮ ಉದಾರವಾದ ಸಹಾಯವನ್ನು ಕೊಡಲು ಉದ್ಯುಕ್ತರಾಗಿರುವದು ನಮ್ಮಗಳ ಭಾಗ್ಯೋದಯವೇ ಸರಿ.

ತಮಗೆ ವೈದ್ಯವಾಗಿರುವಂತೆ, ಒಕ್ಕಲಿಗರ ಕುಲವು ಸಂಸ್ಥಾನದ ಅರ್ಥೋತ್ಪತ್ತಿಗೆ ಮುಖ್ಯ ಸಾಧಕವಾದದ್ದು. ಆದ್ದರಿಂದ ಅವರ ಯೋಗಕ್ಷೇಮಗಳನ್ನು ತಾವು ಪರಮ ವಿಶ್ವಾಸದಿಂದ ನೋಡಿಕೊಳ್ಳುವಿರೆಂತಲೂ,

ಅದಕ್ಕೆ ಸೇರಿದವರು ಕೇಳಿಕೊಳ್ಳುವ ಪ್ರಾರ್ಥನೆಗಳನ್ನು ತಾವು ಲಾಲಿಸಿ ಕೇಳಿ ಪರ್ಯಾಲೋಚಿಸುವಿರೆಂತಲೂ ನಾವು ದೃಢವಾಗಿ ನಂಬಿರುತ್ತೇವೆ. ಆದುದರಿಂದ ಸಂಸ್ಥಾನದ ಶ್ರೇಯೋಭಿವೃದ್ಧಿಗಾಗಿ ತಾವು ಉಪಕ್ರಮಿಸಿ ನಡಿಸುತ್ತಲಿರುವ ಪ್ರಯೋಜನಕಾರಿಗಳಾದ ಎಲ್ಲಾ ಏರ್ಪಾಡುಗಳನ್ನೂ ಕಾರ್ಯತಃ ನಡಿಸುವಲ್ಲಿ ನಾವುಗಳು ಭಯ ಭಕ್ತಿಯಿಂದ ಸಹಾಯಕರಾಗಿ ಸೇರಿ ಕೆಲಸ ಮಾಡುತ್ತೇವೆಂದು ಭರವಸೆಯನ್ನು ಕೊಡುತ್ತೇವೆ. ಮತ್ತು ಈ ರೀತಿಯಲ್ಲಿ ನಾವು ಸೇರಿ ಸಹಾಯ ಮಾಡುವದರಿಂದ ಇನ್ನೂ ವಿಶೇಷವಾದ ಪ್ರಯೋಜನ ವುಂಟಾಗುವದಕ್ಕೋಸ್ಕರ, ಒಕ್ಕಲಿಗರ ಸಂಘದಿಂದ ಸಂಪದಭ್ಯುದಯ ಸಮಾಜಕ್ಕೆ ಇಬ್ಬರು ಮೆಂಬರುಗಳನ್ನೂ ನ್ಯಾಯವಿಧಾಯಕ ಸಭೆಗೆ ಒಬ್ಬರನ್ನೂ ಚುನಾಯಿಸುವದಕ್ಕೆ ತಾವು ದಯವಿಟ್ಟು ಅವಕಾಶವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇವೆ. ಈ ರೀತಿಯಲ್ಲಿ ತಾವು ನಡಿಸಿಕೊಟ್ಟಲ್ಲಿ, ತಮ್ಮಿಂದಲೂ ಸರ್ಕಾರದವರಿಂದಲೂ ನಾವು ಇದುವರೆಗೆ ಪಡೆದಿರತಕ್ಕ ಅನೇಕ ಉಪಕಾರಗಳ ಜೊತೆಗೆ ಇದೊಂದು ಹೆಚ್ಚು ಉಪಕಾರ ವಾಗುವದಲ್ಲದೆ, ಇದನ್ನು ನಮ್ಮ ಕುಲದವರೆಲ್ಲರೂ ಎಂದೆಂದಿಗೂ ಮರೆಯದೆ ಕೃತಜ್ಞರಾಗಿರುವರು.

ಈ ಒಕ್ಕಲಿಗರ ಸಂಘಕ್ಕೆ ಪ್ರಖ್ಯಾತ ಪೋಷಕರಾಗಿ, ಅದರ ಶ್ರೇಯಸ್ಸಿನ ವಿಷಯದಲ್ಲಿಯೂ, ಅದು ಯಾರಿಗೆ ಪ್ರತಿನಿಧಿಯಾಗಿರುವದೋ ಅಂಥ ಜನರ ಪುರೋವೃದ್ಧಿ ವಿಷಯದಲ್ಲಿಯೂ, ಮಕ್ಕಳಮೇಲೆ ತಂದೆಯಾದವನಿಗಿರುವಂಥ ವಾತ್ಸಲ್ಯವನ್ನು ತೋರ್ಪಡಿಸುತ್ತಿರುವ ನಮ್ಮ ಮೈಸೂರು ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹಾದುರವರ ಮೇಲೂ, ನಮ್ಮ ಮೈಸೂರು ಶ್ರೀಮದ್ಯುವರಾಜರವರ ಮೇಲೂ, ನಮ್ಮ ಹೃದಯದಲ್ಲಿ ದೃಢವಾಗಿ ನೆಲಸಿರುವ ವಿಶ್ವಾಸಾತಿಶಯವನ್ನೂ ರಾಜ ಭಕ್ತಿಯನ್ನೂ ತಾವು ದಯೆಯಿಟ್ಟು ತಿಳಿಯಪಡಿಸಬೇಕೆಂದು ತಮ್ಮನ್ನು ಬೇಡಿಕೊಳ್ಳುತ್ತೇವೆ.

ಇದಲ್ಲದೆ ತಮಗೆ ಮತ್ತೊಂದು ವಿಷಯವನ್ನು ವಿಜ್ಞಾಪಿಸಬೇಕಾಗಿದೆ, ಏನೆಂದರೆ:— ಪ್ರಪಂಚದಲ್ಲಿ ಪ್ರಜಾಪಾಲನವು ಸರ್ವೋತ್ತಮ ಸ್ಥಿತಿಯಲ್ಲಿರುವದಲ್ಲದೆ ನಾಗರಿಕತೆಯಲ್ಲಿ ಅದ್ವಿತೀಯವೆನಿಸಿರುವ ದೇಶಗಳ ಸಮಕ್ಕೆ ಈ ನಮ್ಮ ಸಂಸ್ಥಾನವನ್ನೂ ತರಬೇಕೆಂಬ ಉದ್ದೇಶದಿಂದ ತಾವು ಇಲ್ಲಿ ಇದುವರೆಗೆ ಉಪಕ್ರಮಿಸಿರುವ ಮತ್ತು ಮುಂದೆ ಉಪಕ್ರಮಿಸಬೇಕೆಂದಿರುವ ಅನೇಕ ಉತ್ಕೃಷ್ಟಗಳಾದ ದೇಶೋನ್ನತಿ ಹೇತುಭೂತವೆನಿಸುವ ಏರ್ಪಾಡುಗಳಿಗೋಸ್ಕರ, ತಮ್ಮ ವಿಷಯದಲ್ಲಿ ನಮಗೆ ಉಂಟಾಗಿರುವ ಯಥಾರ್ಥವಾದ ಕೃತಜ್ಞತೆಯನ್ನು ತಿಳಿಸಿಕೊಳ್ಳಲು ಅಪ್ಪಣೆಯನ್ನು ಬೇಡುತ್ತೇವೆ. ಅನೇಕ ಸಮಯಗಳಲ್ಲಿ ತಾವು ನಮ್ಮಗಳಿಗೆ ಗಂಭೀರವಾದ ವಾಕ್ಪಟುತೆಯಿಂದಕೊಟ್ಟ ಬುದ್ಧಿವಾದದ ಬಲದಿಂದ, ಪ್ರಜೆಗಳಾದ ನಮ್ಮಮೇಲೆ ಹೊತ್ತಿರುವ ದೇಶಾಭ್ಯುದಯ ಸಹಕಾರಿಯಾದ ದೊಡ್ಡ ಜವಾಬ್ದಾರಿಯನ್ನು ನಾವು ಸ್ವಲ್ಪವೂ ಮರೆಯದಂತೆ ಮಾಡಿರುವದಲ್ಲದೆ, ಸಂಸ್ಥಾನದ ಪ್ರಜೆಗಳನ್ನೆಲ್ಲ ಉನ್ನತಸ್ಥಿತಿಗೆ ತರಬೇಕೆಂದು ತಾವು ಮಾಡುತ್ತಿರುವ ಸಾಹಸಕಾರ್ಯಗಳಿಗಾಗಿ, ವಿಶೇಷ ಮರ್ಯಾದೆಯಿಂದಲೂ ಗೌರವದಿಂದಲೂ ಕೃತಜ್ಞತೆಯಿಂದಲೂಕೂಡಿದ ಮನೋಭಾವಗಳು ನಮ್ಮಲ್ಲಿ ಉದ್ಭವಿಸುತ್ತಿರುವಂತೆ ಮಾಡಿರುತ್ತದೆ.

ಸರ್ವಶಕ್ತನಾದ ಜಗದೀಶ್ವರನು ಅನುಗ್ರಹವಿತ್ತು ತವಗೆ ತಮ್ಮಮಹಾಕಾರ್ಯ ಭಾರವನ್ನು ದಕ್ಷತೆಯಿಂದ ಪರಿಪಾಲಿಸುವದಕ್ಕೆ ಬೇಕಾದ ಆರೋಗ್ಯ ಭಾಗ್ಯವನ್ನೂ ಕಾಯ ಶಕ್ತಿಯನ್ನೂ ಕಾರ್ಯ ನಿರ್ವಾಹ ಶಕ್ತಿಯನ್ನೂ ಕರುಣಿಸಲಿ ಎಂಬುದೇ ನಮ್ಮ ಭಕ್ತಿ ಯುಕ್ತವಾದ ಪ್ರಾರ್ಥನೆಯಾಗಿದೆ.

ತಮ್ಮ ಆಜ್ಞಾಧಾರಕರಾದ,
ಪುಟ್ಟೇಗೌಡ ವಗೈರೆಯವರು,
ಒಕ್ಕಲಿಗರ ಸಂಘದ ಮಹಾಜನಗಳು.

V.

To

M. VISVESVARAYA, Esq., B.A., L.C.E., M.I.C.E., C.I.E.,
Dewan of Mysore.

Sir,

As a Representative of the Central Mahomedan Association of Mysore, I take this opportunity to convey to you the felicitations of my community upon the success that has attended the second year of your administration, a year that has been marked by events of far-reaching importance, which will leave an indelible mark upon the history of Mysore. First and foremost stands the revision of the

Instrument of Transfer, which has raised the status of our Province amongst the Feudatory States of India; and next comes the transfer of the surplus revenue of the Civil and Military Station of Bangalore to the Mysore State; for which acts of justice and generosity, we, in common with other subjects of our beloved Sovereign, feel highly grateful to the British Government.

Coming now to the events at home, the expansion of the Legislative Council, with powers to interpellate and discuss budgets, is a step in the right direction, called for by the spread of education and enlightenment in the State and the increased desire on the part of the people to co-operate with the Government in the administration of their country. We hope that, in course of time, you will give the members power to move resolutions in the Council, without which it is not possible for them to initiate measures of useful reform. In this connection, we beg to invite your attention to the fact that our community is represented by only one nominated member in the Council, which is indeed a poor representation when the total strength of the Council is taken into consideration. With the expansion of the Council we thought that increased representation would also be given to us. But that has not been the case. In Europe, Sir, the principle is now recognized of giving effective, and not merely proportional, representation to the minorities in the Administrative Councils of their countries, and in India the same principle has been followed now in respect of the Supreme and Provincial Legislative Councils, with the result that it has given satisfaction all round and is acknowledged to be well adapted to the conditions of the country. If to safeguard the interest of the minorities effective representation of the latter is deemed necessary in the advanced countries of Europe, where nationality rests upon an economic basis, how much more so in India, and, for the matter of that, in Mysore, where, as you rightly observed in one of your able and instructive Addresses, nationality is founded upon the bed-rock of religion. The forces of progress and enlightenment may, in course of time, bring about a change in our ideals, but till then it will be a grievous mistake to ignore this fundamental distinction. The attitude adopted last year by some of the members of this Assembly towards the representations of the backward classes, and the gratuitous advice offered by one of them to our community, justify us in our demand for an effective representation, which we hope will engage early the attention of the Government, and in that scheme we pray that the principle of election may not be lost sight of, for without it our community will not have the benefit of political education, which is so very necessary for its harmonious co-operation with the members of advanced communities.

The economic activities of the State form a special and a notable feature of your administration. We are aware, Sir, that here and there a dissentient voice is raised against the policy of the Government, because it has not been, in the eyes of its critics, productive of any tangible results. They however forget, Sir, that Rome was not built in a day, and that years of patient toil are necessary to rouse the people from their lethargy and make them adapt themselves, conservative as they are, to the altered conditions of the times. The Government must feel gratified, however, with the awakening of the people in this direction, which in itself is an asset of great value. So far as our community is concerned, we highly appreciate the attempts that are being made to revive the silk industry and other industries followed mostly by the Mahomedans. As the number of the unemployed in our community is daily on the increase, on account of the introduction of machinery and other things, we pray that greater facility may be given to our youths for admission into the Chamarajendra Technical Institute, Mysore, and the Mechanical School at Bangalore.

Coming now to the special representations I have been deputed to make, I beg to draw your attention to our previous Addresses presented at this Assembly, and especially to that of last year, in which we have discussed fully the educational needs and aims of our community. But nothing has come out of these representations, except that the Educational Officers of the Government have exchanged views with the prominent members of our Association. Our schools remain ill-housed, ill-equipped and ill-manned. Our demand for English education has not been satisfied by the opening of fresh Anglo-Hindustani schools. Our inspecting agency has not been strengthened, as desired, and even the " Model " institution of Bangalore has not advanced one step further, though we are told that large sums

of money have been allowed to lapse from the Educational Budget. In this connection, I beg to state that the community has been greatly exercised in mind by the rumours that have spread abroad, that under the system of compulsory education recently introduced into our State the Mahomedans are not to receive their education through their own vernacular. It has been the well-established policy of the State to educate the people through the medium of their own vernaculars, and that is the reason why separate schools have been started for Telugu, Tamil, Mahratti and Hindustani-speaking people. This policy, Sir, which was initiated by the British Government and continued by Dewan Ranga Charlu, received its full development in the time of Sir K. Sheshadri Iyer, and has been the chief cause of the contentment of our community. I venture to state that a reversal of this policy will cause great dissatisfaction, and will defeat the very object underlying the principle of compulsion. We are aware of the laudable intentions of the Government to make our boys learn the Kannada language, but beyond a colloquial knowledge of it we do not feel the necessity for the acquisition of higher proficiency. Firstly, because it is of no use outside the Mysore State; and secondly, because no value is attached to it inside the Province itself, as, for all appointments carrying a pay of Rs. 10 and upwards, a knowledge of English is deemed essential.

As regards higher education, our boys are greatly handicapped for want of facilities in the Maharaja's college for the teaching of Persian up to the B.A. standard. We beg that a Professor of Persian may be appointed early, so that the Oriental side of the Maharaja's college may become complete.

I am instructed next to refer to the question of the employment of our young men in the Public Service, and to acknowledge with gratitude that the claims of our community have not been overlooked in the recent appointments made to the Civil Service, which have given universal satisfaction. But we have not been fortunate enough in the case of judicial appointments. Out of 19 appointments in the Munsiffs' cadre, we pray that one at least may be given to a deserving member of our community possessing the requisite qualifications. We are aware that this extremely moderate request of ours is not looked upon with favour in certain quarters. But this, Sir, was not the policy of the late Sir K. Sheshadri Iyer, who appointed a member of our community as soon as he found one was forthcoming with the necessary qualifications. In his day we had no organisation of any kind to bring to his notice the needs and aims of our community. A remarkable man, as he was, he anticipated all our needs, and satisfied them before we became aware of the same. To secure a proper representation of all classes in this branch of the Service, we pray that the system of appointing Judicial Probationers, inaugurated by the late Sir K. Sheshadri Iyer, may be revived. The Judicial Probationers appointed by him, and subsequently by Sir P. N. Krishna Murthi, have been tried in various capacities, and have not been found wanting. Some of them are holding high and honourable positions, with credit to themselves and benefit to the State. There is no reason, Sir, why this system should not succeed again, if a judicious selection is made in the beginning.

I cannot conclude this Address, Sir, without making a reference to the devastating war which is now raging on the continent of Europe, and in which the Government of His Britannic Majesty has been involved in defence of a just and upright cause. The war has evoked feelings of loyalty from all classes of people in India and of His Highness' subjects in Mysore, and has brought home to them the manifold blessings which the British rule has conferred upon India and the Indian people. The splendid contribution which our beloved Maharaja has made towards the War Fund, though just in keeping with the traditions of his house, has filled the minds of all his subjects with a glow of pride and pleasure, and we hope to follow his example in our humble way by contributing to the War Fund and the Relief Fund started by His Excellency the Viceroy.

I have the honour to remain,
Sir,
Your most obedient servant,
MAHOMMED ABBAS KHAN,
Representative Member of the Central Mahomedan Association of Mysore, Bangalore.

MYSORE,
30th September 1914.

Translation of the above.

V.

ಮೈಸೂರು ದಿವಾನರವರಾದ ಎಮ್. ವಿಶ್ವೇಶ್ವರಯ್ಯ, ಎಸ್ಕ್ವೈರ್, ಬಿ. ಎ., ಎಲ್. ಸಿ. ಇ., ಎಮ್. ಐ. ಸಿ. ಇ., ಸಿ. ಐ. ಇ., ಯವರಿಗೆ.

ಸ್ವಾಮಿ,

ತಾವು ದಿವಾನಗಿರಿಗೆ ದಯೆಮಾಡಿದ ಎರಡನೆಯ ಸಂವತ್ಸರದಲ್ಲಿ ರಾಜ್ಯದ ಆಡಳಿತಗಳನ್ನು ಸಮರ್ಥತೆಯಿಂದ ನಿರ್ವಹಿಸಿದ್ದಕ್ಕಾಗಿ, ಮೈಸೂರು ಸೆಂಟ್ರಲ್ ಮಹಮ್ಮದೀಯ ಸಂಘದವರ ಪರವಾಗಿ ಅವರ ಪ್ರತಿನಿಧಿಯಾದ ನಾನು ಅಭಿನಂದನಗಳನ್ನು ತಮಗೆ ಈಗ ತಿಳಿಯಪಡಿಸಲಪೇಕ್ಷಿಸುತ್ತೇನೆ. ಈ ಎರಡನೆಯ ಸಂವತ್ಸರದಲ್ಲಿ ನಡೆದ ಅನೇಕ ಸಂಗತಿಗಳು ಬಹು ಮುಖ್ಯವಾದವುಗಳಾಗಿಯೂ ಮೈಸೂರು ಚರಿತ್ರೆಯಲ್ಲಿ ಚಿರಸ್ಮರಣೀಯಗಳಾಗಿಯೂ ಇರುತ್ತವೆ. ಇವುಗಳೊಳಗೆಲ್ಲ ಅಗ್ರಗಣ್ಯವಾವದ್ದು, ಇಂಡಿಯ ಸಾಮಂತರಾಜ್ಯಗಳಲ್ಲಿ ನಮ್ಮ ಸಂಸಾನಕ್ಕೆ ಪ್ರಾಶಸ್ತ್ಯವನ್ನುಂಟು ಮಾಡಿರುವ ಮೈಸೂರು ತಹನಾಮೆಯ ಪರಿಷ್ಕರಣವು. ಇದಕ್ಕೆ ಎರಡನೆಯದು, ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಖರ್ಚು ಜಾತಾ ಉಳಿದ ಹುಟ್ಟುವಳಿಯನ್ನು ಮೈಸೂರು ಸಂಸ್ಥಾನಕ್ಕೆ ವರ್ಗಾಯಿಸಿದ್ದಾಗಿದೆ. ಬ್ರಿಟಿಷ್ ಸರ್ಕಾರದವರು ಈರೀತಿಯಲ್ಲಿ ತೋರಿಸಿದ ನ್ಯಾಯಕ್ಕಾಗಿಯೂ ಔದಾರ್ಯಕ್ಕಾಗಿಯೂ, ನಮ್ಮ ಶ್ರೀಮನ್ಮಹಾರಾಜರವರ ಇತರ ಪ್ರಜೆಗಳೊಡನೆ ನಾವೂ ಸಹ ಬ್ರಿಟಿಷ್ ಸರ್ಕಾರದವರಿಗೆ ಕೇವಲಕೃತಜ್ಞರಾಗಿರುತ್ತೇವೆ.

ಈಗ ದೇಶದೊಳಗೆ ನಡೆದ ಏರ್ಪಾಡುಗಳನ್ನು ಕುರಿತು ಪ್ರಸ್ತಾಪಿಸುವೆನು: ನ್ಯಾಯ ವಿಧಾಯಕ ಸಭೆಯ ಮೆಂಬರುಗಳನ್ನು ಹೆಚ್ಚಿಸಿ, ರಾಜ್ಯದ ಆಡಳಿತದ ವಿಷಯದಲ್ಲಿ ಸಂಜಾಯಿಷಿ ಕೇಳುವ ಅಧಿಕಾರವನ್ನೂ, ಬಜೆಟ್ಟನ್ನು ಕುರಿತು ಚರ್ಚಿಸುವ ಅಧಿಕಾರವನ್ನೂ, ಅದಕ್ಕೆ ಕೊಟ್ಟಿರುವದು ಬಹು ಯೋಗ್ಯವಾದ ಏರ್ಪಾಡಾಗಿರುತ್ತದೆ. ಸಂಸ್ಥಾನದಲ್ಲಿ ವಿದ್ಯೆಯೂ ನಾಗರಿಕತೆಯೂ ವಿಸ್ತರಿಸಿಕೊಳ್ಳುತ್ತಲಿರುವುದರಿಂದಲೂ, ಪ್ರಜೆಗಳು ತಮ್ಮ ದೇಶದ ಆಡಳಿತಗಳನ್ನು ನೋಡಿಕೊಳ್ಳುವ ಕೆಲಸದಲ್ಲಿ ಸರ್ಕಾರದವರೊಡನೆ ತಾವೂ ಸೇರಿ ಸಹಾಯ ಮಾಡಬೇಕೆಂಬ ಅಪೇಕ್ಷೆ ಅವರಲ್ಲಿ ಬಹಳವಾಗಿ ಹೆಚ್ಚಿರುವುದರಿಂದಲೂ ಆರೀತಿ ಏರ್ಪಡಿಸಲಾಗಿರುತ್ತದೆ. ಕಾಲಕ್ರಮದಲ್ಲಿ ಆಸಭೆಯ ಮೆಂಬರುಗಳಿಗೆ ಮಾಡಬೇಕಾದ ನಿರ್ಣಯಗಳನ್ನು ಕುರಿತು ಸಲಹೆ ಕೊಡತಕ್ಕ ಅಧಿಕಾರವನ್ನು ಸಹ ತಾವು ಕೊಡುವಿರಿ ಎಂಬದಾಗಿ ನಂಬಿರುತ್ತೇವೆ; ಏಕೆಂದರೆ ಆ ಅಧಿಕಾರವಿಲ್ಲದಿದ್ದರೆ ಉಪಯುಕ್ತವಾದ ಪರಿಷ್ಕರಣಕ್ಕೆ ಬೇಕಾದ ಯಾವ ಏರ್ಪಾಡುಗಳನ್ನಾಗಲೀ ಉಪಕ್ರಮಿಸುವುದಕ್ಕೆ ಅವರಿಂದ ಸಾಧ್ಯವಾಗದು. ಈ ನ್ಯಾಯ ವಿಧಾಯಕ ಸಭೆಯಲ್ಲಿ ನಮ್ಮ ಮಹಮ್ಮದೀಯ ಪಂಗಡಕ್ಕೆಲ್ಲ ಪ್ರತಿನಿಧಿಯಾಗಿ ಒಬ್ಬರೇ ಒಬ್ಬ ನಾಮಿನೇಟೆಡ್ ಮೆಂಬರು ಇರುತ್ತಾರೆಂಬ ಸಂಗತಿಯನ್ನು ಈ ಸಂದರ್ಭದಲ್ಲಿ ತಮ್ಮ ಅವಧಾನಕ್ಕೆ ತರಲು ಅಪ್ಪಣೆಯನ್ನು ಬೇಡುತ್ತೇವೆ. ಸಭೆಯಲ್ಲಿರುವ ಒಟ್ಟು ಮೆಂಬರುಗಳ ಸಂಖ್ಯೆಯನ್ನು ತೆಗೆದುಕೊಂಡರೆ ಈ ಒಬ್ಬರಿರುವದು ಏನೇನೂ ಸಾಲದು. ಸಭೆಯ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸಿದಾಗ ನಮ್ಮ ಪರವಾಗಿ ಪ್ರತಿನಿಧಿಗಳನ್ನೂ ಹೆಚ್ಚಿಸಬಹುದೆಂದು ಭಾವಿಸಿದ್ದೆವು; ಆದರೆ ಆರೀತಿ ಆಗಿರುವುದಿಲ್ಲ. ಯೂರೋಪ್ ಖಂಡದಲ್ಲಿ ಆಯಾ ದೇಶಗಳ ಆಡಳಿತಗಳನ್ನು ನೋಡಿಕೊಳ್ಳುವ ಸಭೆಗಳಲ್ಲಿ ಅಲ್ಪ ಸಂಖ್ಯಾಕರಾದ ಪಂಗಡಗಳಿಗೆ ಸಂಖ್ಯಾನುಗುಣವಾದ ಪ್ರತಿನಿಧಿತ್ವವನ್ನು ಮಾತ್ರವೇ ಅಲ್ಲದೆ ಪ್ರಬಲವಾದ ಪ್ರತಿನಿಧಿತ್ವವನ್ನು ಕೊಡಬೇಕೆಂಬ ಸಿದ್ಧಾಂತವು ಅಂಗೀಕರಿಸಲ್ಪಡುತ್ತಿದೆ; ಇಂಡಿಯಾದೇಶದಲ್ಲಿಯೂ ಸುಪ್ರೀಮ್ ಮತ್ತು ಪ್ರೊವಿನ್ಷಿಯಲ್ ಲೆಜಿಸ್ಲೆಟಿವ್ ಕೌನ್ಸಿಲುಗಳಲ್ಲಿ ಇದೇ ಸಿದ್ಧಾಂತವೇ ಅಂಗೀಕರಿಸಲ್ಪಟ್ಟು, ಸರ್ವರಿಗೂ ತೃಪ್ತಿಕರವೆನ್ನಿಸಿರುವದಲ್ಲದೆ, ಅದು ದೇಶದ ಈಗಿನ ಸ್ಥಿತಿಗಳಿಗೆ ಅನುಗುಣವಾಗಿದೆ ಎಂದು ಒಪ್ಪಲ್ಪಟ್ಟಿರುತ್ತದೆ. ಅಲ್ಪ ಸಂಖ್ಯಾಕರಾದ ಜನಗಳ ಯೋಗಕ್ಷೇಮಾರ್ಥವಾಗಿ ಅವರಿಗೆ ಪ್ರಬಲ ಪ್ರತಿನಿಧಿತ್ವವನ್ನು ಕೊಡಬೇಕು ಎಂಬುದು, ಜನಾಂಗ ಸ್ಥಿತಿಗೆ ವ್ಯಾಪಾರ ವ್ಯವಸಾಯಾದಿಗಳು ಆಧಾರವಾಗಿರತಕ್ಕ ಯೂರೋಪ್ ಖಂಡದೊಳಗಣ ನಾಗರಿಕ ದೇಶಗಳಲ್ಲಿಯೇ ಅವಶ್ಯವೆಂದು ಕಂಡು ಬಂದಿರುವಲ್ಲಿ, ತಾವು ತಮ್ಮ ಸಮರ್ಥವೂ ವಿಷಯ ಬೋಧಕವೂ ಆದ ಬಂದಾನೊಂದು ಉಪನ್ಯಾಸದಲ್ಲಿ ಉಚಿತ ರೀತಿಯಲ್ಲಿ ಅಪ್ಪಣೆ ಕೊಡಿಸಿರುವಂತೆ, ಜನಾಂಗ ಸ್ಥಿತಿಗೆ ಮತವೇ ಮೂಲಾಧಾರವಾಗಿರತಕ್ಕ ಇಂಡಿಯವಲ್ಲಿಯೂ, ಈ ಮೈಸೂರಿನಲ್ಲಿಯೂ ಕೂಡ, ಸದರಿ ಪ್ರಬಲ ಪ್ರತಿನಿಧಿತ್ವವು ಎಷ್ಟು ವಿಶೇಷ ಅವಶ್ಯವೆಂಬುದನ್ನು ಹೇಳತಕ್ಕದ್ದೇನಿದೆ? ಪುರೋವೈದ್ಧಿ ಬಲದಿಂದಲೂ ನಾಗರಿಕತೆಯ ಬಲದಿಂದಲೂ ಕಾಲಕ್ರಮೆದಲ್ಲಿ ನಮ್ಮ ಮನೋರಥಗಳಲ್ಲಿ ವ್ಯತ್ಯಾಸಗಳುಂಟಾಗಬಹುದು; ಆದರೆ ಅದುವರೆಗೆ ಮೌಲಿಕತತ್ವ ಭೇದವನ್ನು ಮರೆತು ಬಿಡುವದು ದೊಡ್ಡ ತಪ್ಪೆಂದು ಎಣಿಸಬೇಕಾಗಿದೆ. ಹೋದ ವರ್ಷ ಹಿಂದುಳಿದಿರುವ ಪಂಗಡಗಳವರನ್ನು

ಕುರಿತು ಮಾಡಿದ ಅರಿಕೆಗಳ ವಿಷಯದಲ್ಲಿ ಈ ಸಭೆಯ ಮೆಂಬರುಗಳಲ್ಲಿ ಕೆಲವರು ತೋರ್ಪಡಿಸಿಕೊಂಡ ಸ್ವಭಾವದಿಂದಲೂ, ಅವರಲ್ಲೊಬ್ಬರು ನಮ್ಮ ಪಂಗಡದವರಿಗೆ ಅನವಶ್ಯಕವಾಗಿ ಮಾಡಿದ ಬುದ್ಧಿವಾದದಿಂದಲೂ ನಮಗೆ ಪ್ರಬಲ ಪ್ರತಿನಿಧಿತ್ವವನ್ನು ಕೊಡಬೇಕೆಂತ ಕೇಳುವದು ನ್ಯಾಯವೆಂದು ತೋರುವುದು. ಈ ವಿಷಯವನ್ನು ಸರ್ಕಾರದವರು ಶೀಘ್ರದಲ್ಲಿ ಪರ್ಯಾಲೋಚನೆಗೆ ತೆಗೆದುಕೊಳ್ಳುವರೆಂದು ಭಾವಿಸಿರುತ್ತೇವೆ. ಮತ್ತು ಈ ಏರ್ಪಾಡಿನಲ್ಲಿ ಚುನಾವಣೆಯ ಪದ್ಧತಿಯನ್ನೂ ಬಿಡಲಾಗದೆಂದು ಪ್ರಾರ್ಥಿಸಿಕೊಳ್ಳುತ್ತೇವೆ; ಏಕೆಂದರೆ, ಹಾಗೆಬಿಟ್ಟರೆ, ಈಗಾಗಲೇ ಅಭಿವೃದ್ಧಿಗೆ ಬಂದಿರುವ ಇತರ ಪಂಗಡಗಳ ಜನರೊಡನೆ ಐಕಮತ್ಯದಿಂದ ಸಂಮಿಳಿತರಾಗಿ ಕೆಲಸಮಾಡುವದಕ್ಕೆ ಅವಶ್ಯಕವಾಗಿ ಬೇಕಾಗಿರುವ ರಾಜ್ಯತಂತ್ರವಿಚಾರಕ ಶಿಕ್ಷಣದ ಪ್ರಯೋಜನವು ಅವರಿಗೆ ಇಲ್ಲದೆ ಹೋಗುವದು.

ಸಂಸ್ಥಾನದಲ್ಲಿ ಸಂಪದಭಿವೃದ್ಧಿಗೆ ಸಾಧಕಗಳಾದ ಏರ್ಪಾಡುಗಳನ್ನು 'ನಡಿಸುತ್ತಿರುವದೇ, ತಮ್ಮ ರಾಜ್ಯಭಾರ ಕ್ರಮದಲ್ಲಿ ಗಣನಾರ್ಹವಾದ ವಿಶೇಷಾಂಶವಾಗಿರುವದು. ಸರ್ಕಾರದವರು ಅನುಸರಿಸುತ್ತಿರುವ ಮಾರ್ಗವು ಸಮರ್ಪಕವಾಗಿಲ್ಲವೆಂದು ಹೇಳತಕ್ಕವರೂ ಕೂಡ ಅಲ್ಲಲ್ಲಿ ಇರುತ್ತಾರೆಂದು ನಾವೂ ಬಲ್ಲೆವು. ಆಕ್ಷೇಪಣೆ ಮಾಡತಕ್ಕವರ ಕಣ್ಣಿಗೆ ಯಾವ ಪ್ರತ್ಯಕ್ಷ ಫಲವೂ ಕಾಣದಿರುವದೇ ಈ ಆಕ್ಷೇಪಣೆಗೆ ಕಾರಣವಾಗಿದೆ ಆದರೆ ಯಾವದೊಂದು ಮಹಾಕಾರ್ಯವನ್ನಾಗಲೀ ಅಲ್ಪಕಾಲದಲ್ಲಿಯೇ ಸಾಧಿಸಲಾಗುವುದಿಲ್ಲವೆಂಬುದನ್ನೂ, ಜನಗಳನ್ನು ಅವರ ಗಾಢನಿದ್ರೆಯಿಂದ ಎಬ್ಬಿಸಿ, ಪ್ರಾಚೀನಾಚಾರದಲ್ಲಿಯೇ ದುರಭಿಮಾನವನ್ನಿಟ್ಟುಕೊಂಡಿರುವ ಈ ಕಾಲದ ಸ್ಥಿತಿಗತಿಗಳಿಗೆ ತಕ್ಕಂತೆ ಮಾರ್ಗಾಂತರಗಳನ್ನು ಅವಲಂಬಿಸುವಂತೆ ಮಾಡುವುದಕ್ಕೆ ವರ್ಷಾಂತರಗಳ ವರೆಗೆ ಅತಿಸಹನದಿಂದ ಸಾಹಸ ಪಡಬೇಕೆಂಬುದನ್ನೂ ಮೇಲ್ಕಂಡ ಆಕ್ಷೇಪಕರು ಮರೆತು ಬಿಡುತ್ತಾರೆ. ಆದರೆ ಈ ಭಾಗದಲ್ಲಿ ಜನಗಳಿಗೆ ತಿಳಿವಳಿಕೆ ಬಂದಿರುವದೇ ಅಮೂಲ್ಯವಾದ ಆಸ್ತಿಯಾದ್ದರಿಂದ, ಇಷ್ಟಮಾತ್ರದಿಂದಲೇ ಸರ್ಕಾರದವರು ಸಂತುಷ್ಟರಾಗ ಬೇಕಾಗಿದೆ. ವಿಶೇಷವಾಗಿ ಮಹಮ್ಮದೀಯರು ಅನುಸರಿಸುತ್ತಿರುವ ಕೇಷ್ಮೀಯ ಕೈಗಾರಿಕೆಯನ್ನೂ ಇತರ ಕೈಗಾರಿಕೆಗಳನ್ನೂ ಪುನರುಜ್ಜೀವಿಸುವಂತೆ ಸರ್ಕಾರದವರು ಮಾಡುತ್ತಿರುವ ಏರ್ಪಾಡುಗಳು ನಮ್ಮ ಅತಿಶಯವಾದ ಶ್ಲಾಘನೆಗೆ ಪಾತ್ರವಾಗಿರುತ್ತವೆ. ನೂತನ ಯಂತ್ರಾದಿಗಳನ್ನು ಬಳಕೆಗೆ ತಂದಿರುವದರಿಂದ ನಮ್ಮ ಪಂಗಡದವರಲ್ಲಿ ಕೆಲಸಸಿಕ್ಕದೆ ಕಷ್ಟ ಪಡುತ್ತಿರುವ ಜನಗಳ ಸಂಖ್ಯೆ ಹೆಚ್ಚುತ್ತಿರುವಕಾರಣ, ಮೈಸೂರು ಚಾಮರಾಜೇಂದ್ರಟೆಕ್ನಿಕಲ್ ಇನ್‌ಸ್ಟಿಟ್ಯೂಟಿಗೂ ಬೆಂಗಳೂರು ಮೆಕ್ಯಾನಿಕಲ್ ಸ್ಕೂಲಿಗೂ ನಮ್ಮ ಹುಡುಗರನ್ನು ಸೇರಿಸಿ ಕೊಳ್ಳುವುದಕ್ಕೆ ಹೆಚ್ಚು ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು.

ಸಂಘದವರಿಂದ ಆಜ್ಞಾಪ್ತನಾಗಿ ತಮ್ಮಲ್ಲಿ ತಿಳಿಯಪಡಿಸಬೇಕಾದ ವಿಶೇಷ ವಿಜ್ಞಾಪನೆಗಳನ್ನು ಕುರಿತು ಈಗ ಪ್ರಸ್ತಾಪಿಸುವೆನು: ಹಿಂದೆ ಈ ಸಭೆಯಲ್ಲಿ ನಮ್ಮವರು ಒಪ್ಪಿಸಿದ ಅಭಿನಂದನ ಪತ್ರಿಕೆಗಳಿಗೆ, ಮುಖ್ಯವಾಗಿ ಹೋದವರ್ಷ ಒಪ್ಪಿಸಿದ ಪತ್ರಿಕೆಗೆ, ತಮ್ಮ ಅವಧಾನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರಲ್ಲಿ ನಮ್ಮ ಪಂಗಡದವರಿಗೆ ಆಗಬೇಕಾದ ವಿದ್ಯಾಭ್ಯಾಸವೇ ಮೊದಲಾದ ಸಂಗತಿಗಳನ್ನೆಲ್ಲ ಪೂರ್ತಿಯಾಗಿ ಚರ್ಚಿಸಿರುತ್ತೇವೆ. ಆದರೆ ವಿದ್ಯಾಭ್ಯಾಸದ ಇಲಾಖೆಯ ಆಫೀಸರುಗಳೂ ನಮ್ಮ ಸಂಘದವರಲ್ಲಿ ಮುಖಂಡರಾದವರೂ ಪರಸ್ಪರವಾಗಿ ಈವಿಷಯದಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿರುವದು ಹೊರತು, ಮೇಲ್ಕಂಡ ಅರಿಕೆಗಳಿಂದ, ಮತ್ತಾವಪ್ರಯೋಜನವೂ ಆಗಿರುವುದಿಲ್ಲ. ನಮ್ಮ ಸ್ಕೂಲುಗಳನ್ನಿಡುವದಕ್ಕೆ ಒಳ್ಳೆ ಮನೆಗಳಿಲ್ಲ, ಅವುಗಳಿಗೆ ಬೇಕಾದ ಸಲಕರಣೆಗಳಿಲ್ಲ; ಸಮರ್ಥರಾದ ಉಪಾಧ್ಯಾಯರಿಲ್ಲ. ಹೊಸದಾಗಿ ಆಂಗ್ಲೋ ಹಿಂದುಸ್ತಾನಿ ಸ್ಕೂಲುಗಳನ್ನು ಸ್ಥಾಪಿಸುವುದರ ಮೂಲಕ, ನಮಗೆ ಇಂಗ್ಲಿಷ್ ವಿದ್ಯಾಭ್ಯಾಸವು ದೊರೆಯುವಂತೆ ಮಾಡಬೇಕೆಂದು ಕೇಳಿಕೊಂಡಕೋರಿಕೆಯು ಕೈಗೂಡಲಿಲ್ಲ. ನಾವು ಪ್ರಾರ್ಥಿಸಿಕೊಂಡಂತೆ ನಮ್ಮ ಇನ್‌ಸ್ಪೆಕ್ಟಿಂಗ್ ಶಿಬ್ಬಂದಿಯನ್ನೂ ಬಲಪಡಿಸಲಿಲ್ಲ. ವಿದ್ಯಾಭ್ಯಾಸದ ಬಜೆಟ್ಟಿನಲ್ಲಿ ಸೇರಿಸಿದ್ದ ಬಹು ಭಾಗದ ಹಣವು ಲ್ಯಾಪ್ಸ್ ಆಯಿತೆಂದು ಕೇಳಿರುವೆವಾದರೂ, ಬೆಂಗಳೂರಿನ "ಮೊಡಲ್" ಸ್ಕೂಲ್ ಸಹ ಸ್ವಲ್ಪವೂ ಅಭಿವೃದ್ಧಿಗೆ ಬಂದಿಲ್ಲ. ಈ ಸಂದರ್ಭದಲ್ಲಿ ನಾನು ಮತ್ತೊಂದು ಸಂಗತಿಯನ್ನು ವಿಜ್ಞಾಪಿಸಬೇಕಾಗಿದೆ, ಏನೆಂದರೆ—ಸಂಸ್ಥಾನದಲ್ಲಿ ಈಚೆಗೆ ಜಾರಿಗೆ ತಂದಿರುವ ನಿರ್ಬಂಧ ವಿದ್ಯಾಭ್ಯಾಸದ ಕ್ರಮಾನುಸಾರವಾಗಿ ಮಹಮ್ಮದೀಯರಿಗೆ ಅವರ ಸ್ವಭಾಷೆಯ ಮೂಲಕ ವಿದ್ಯಾಭ್ಯಾಸ ಮಾಡಿಸುವುದಿಲ್ಲವೆಂದು ಎಲ್ಲೆಲ್ಲಿಯೂ ಪರಡಿಕೊಂಡಿರುವ ಸಮಾಚಾರವನ್ನು ಕೇಳಿ ನಮ್ಮ ಪಂಗಡದವರು ತುಂಬಾ ಮನೋವ್ಯಾಕುಲವುಳ್ಳವರಾಗಿರುತ್ತಾರೆ. ಆಯಾ ಪ್ರಜೆಗಳಿಗೆ ಅವರವರ ದೇಶಭಾಷೆಗಳ ಮೂಲಕವಾಗಿಯೇ ವಿದ್ಯಾಭ್ಯಾಸ ಮಾಡಿಸಬೇಕೆಂಬುದು ಈ ಸಂಸ್ಥಾನದಲ್ಲಿ ಬಹು ಕಾಲದಿಂದಲೂ ನಡೆದು ಬಂದ ಸರ್ಕಾರೀ ಪದ್ಧತಿಯಾಗಿದೆ. ಈ ಕಾರಣದಿಂದಲೇ ತೆಲುಗು, ತಮಿಳು, ಮರಾಟಿ, ಹಿಂದುಸ್ತಾನಿ ಭಾಷೆಗಳನ್ನಾಡುವ ಜನಗಳಿಗೆ ಬೇರೆ ಬೇರೆ ಸ್ಕೂಲುಗಳು ಸ್ಥಾಪಿಸಲ್ಪಟ್ಟಿರುತ್ತವೆ. ಈ ಪದ್ಧತಿಯನ್ನು ಬ್ರಿಟಿಷ್ ಸರ್ಕಾರದವರು ಮೊದಲು ಮಾಡಿದರು; ಅದನ್ನೇ ದಿವಾ೯ ರಂಗಾಚಾರ್ಯರವರು ಅನುಸರಿಸಿದರು. ಬಳಿಕ ಅದು

ಸರ್. ಕೆ. ಶೇಷಾದ್ರಿಅಯ್ಯರವರ ಕಾಲದಲ್ಲಿ ಪ್ರವರ್ಧಮಾನವಾಗಿ, ನಮ್ಮ ಪಂಗಡದವರಿಗೆ ಇದುವರೆಗೂ ತೃಪ್ತಿಕರವಾಗಿ ನಡೆದುಕೊಂಡು ಬಂದಿರುತ್ತದೆ. ಈ ಪದ್ಧತಿ ಈಗ ತಪ್ಪಿ ಹೋದರೆ ಎಲ್ಲರಿಗೂ ಅತೃಪ್ತಿಯುಂಟ್ಮಾಗುವುದು ನಿಶ್ಚಿತವಲ್ಲದೆ ನಿರ್ಬಂಧ ವಿದ್ಯಾಭ್ಯಾಸ ಕ್ರಮದ ಮುಖ್ಯೋದ್ದೇಶವನ್ನೇ ವಿಫಲವಾದದ್ದನ್ನಾಗಿ ಮಾಡುವುದು. ನಮ್ಮ ಹುಡುಗರಿಗೆ ಕನ್ನಡವನ್ನು ಕಲಿಸಬೇಕೆಂದು ಸರ್ಕಾರದವರು ಉದ್ದೇಶಿಸಿರುವದು ಶ್ಲಾಘನೀಯವಾಗಿದೆಯೆಂದು ನಾವು ಬಲ್ಲೆವು; ಆದರೆ ಆಭಾಷೆ ಸಾಮಾನ್ಯವಾಗಿ ತಿಳಿದರೆ ಸಾಕಾಗಿದೆ, ಅದರಲ್ಲಿ ಪಾಂಡಿತ್ಯವನ್ನು ಸಂಪಾದಿಸಬೇಕಾದ ಆವಶ್ಯಕತೆಯು ನಮಗಿಲ್ಲ; ಏಕೆಂದರೆ (1) ಮೈಸೂರು ಸಂಸ್ಥಾನದ ಹೊರಗ ಅದರಿಂದ ಏನೂ ಪ್ರಯೋಜನವಿಲ್ಲ, (2) ಸಂಸ್ಥಾನದೊಳಗೂ ಕೂಡ ಅದಕ್ಕೆ ಯಾವ ಗೌರವವೂ ಇಲ್ಲ; ಏಕೆಂದರೆ 10 ರೂಪಾಯಿ ಮೆತ್ತು ಅವಕ್ಕೆ ಮೇಲ್ಪಟ್ಟ ಸಂಬಳವಿರುವ ನೌಕರಿಗಳಿಗೆ ಇಂಗ್ಲಿಷ್ ಭಾಷಾಭ್ಯಾಸವು ಅವಶ್ಯವೆಂದು ಭಾವಿಸಲಾಗಿದೆ.

ಪೌಢವಿದ್ಯಾಭ್ಯಾಸವೋ ಎಂದರೆ, ಮಹಾರಾಜಾ ಕಾಲೇಜಿನಲ್ಲಿ ಬಿ. ಎ. ಪರೀಕ್ಷೆಯವರೆಗೆ ಪರ್ಯಂತ ಭಾಷೆಯನ್ನು ಕಲಿಸುವುದಕ್ಕೆ ಏರ್ಪಾಡಿಲ್ಲದಿರುವೆದರಿಂದ, ತಕ್ಕ ಸೌಲಭ್ಯಗಳಿಲ್ಲದೆ ನಮ್ಮವರ ಹುಡುಗರಿಗೆ ತುಂಬಾ ಅನನುಕೂಲವಾಗಿದೆ. ಮಹಾರಾಜಾ ಕಾಲೇಜಿನಲ್ಲಿ ಪಾಶ್ಚಾತ್ಯ ವಿದ್ಯಾಭ್ಯಾಗವು ಪೂರ್ತಿಯಾಗುವುದ ಕ್ಕೋಸ್ಕರ ಒಬ್ಬ ಪರ್ಯಂತ ಪ್ರೊಫೆಸರನ್ನು ತೀರ್ಥರಹಳ್ಳಿಯೇ ನೇಮಿಸಬೇಕು.

ಇದಲ್ಲದೆ ನಮ್ಮ ಪಂಗಡಕ್ಕೆ ಸೇರಿದ ತರುಣರನ್ನು ಸರ್ಕಾರೀ ಕೆಲಸಗಳಲ್ಲಿ ಸೇರಿಸತಕ್ಕ ವಿಷಯವನ್ನು ಪ್ರಸ್ತಾಪಿಸಬೇಕೆಂತಲೂ, ನಮ್ಮವರ ಹಕ್ಕುಗಳನ್ನು ಉಪೇಕ್ಷೆ ಮಾಡದೆ ಈಚೆಗೆ ಸಿವಿಲ್ ಸರ್ವಿಸ್ಸಿಗೆ ನಮ್ಮವರನ್ನು ನೇಮಿಸಿಕೊಳ್ಳುವುದರಮೂಲಕ ಸಕಲರಿಗೂ ತೃಪ್ತಿಯನ್ನುಂಟುಮಾಡಿರುವದಕ್ಕಾಗಿ ನಮ್ಮ ಕೃತಜ್ಞತೆಯನ್ನು ತಿಳಿಸಬೇಕೆಂತಲೂ ಸಂಘದವರು ನನಗೆ ಆಜ್ಞೆ ಮಾಡಿರುತ್ತಾರೆ. ಆದರೆ ಜುಡಿಷಲ್ ಹುದ್ದೆಗಳ ವಿಷಯದಲ್ಲಿ ನಮ್ಮವರಿಗೆ ಇನ್ನೂ ಅನುಕೂಲತೆಯು ದೊರೆತಿರುವುದಿಲ್ಲ. ಮುನ್ಸಿಫ್ ಹುದ್ದೆಗಳು 19ರ ಪೈಕಿ ಒಂದನ್ನಾದರೂ ನಮ್ಮಲ್ಲಿ ಸರಿಯಾದ ವಿದ್ಯಾಕಾಮರ್ಥ್ಯವನ್ನು ಪಡೆದು ಅರ್ಜಿಕೊಟ್ಟಿರುವವರಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇವೆ. ಈ ಪ್ರಾರ್ಥನೆಯು ಕೇವಲ ವಿನೀತವಾದದ್ದಾದರೂ, ಕೆಲವರಿಗೆ ಇದರ ವಿಷಯದಲ್ಲಿ ಅನುಕೂಲವಾದ ಅಭಿಪ್ರಾಯವಿಲ್ಲವೆಂಬುದನ್ನು ನಾವು ಬಲ್ಲೆವು. ಆದರೆ ಸರ್.ಕೆ. ಶೇಷಾದ್ರಿ ಅಯ್ಯರವರು ಆ ರೀತಿ ಭಾವಿಸಿರಲಿಲ್ಲ; ಅವರು ನಮ್ಮವರಲ್ಲಿ ಯಾರಾದರೂ ಅವಶ್ಯಕವಾದ ಯೋಗ್ಯತೆಯನ್ನು ಪಡೆದು ಬಂದಿರುವರೆಂದು ತಿಳಿದ ಕೂಡಲೆ ಕೆಲಸಕ್ಕೆ ನೇಮಿಸಿಕೊಳ್ಳುತ್ತಿದ್ದರು. ಅವರ ದಿವಸಗಳಲ್ಲಿ ನಮ್ಮವರಿಗೆ ಬೇಕಾದ ಸಂಗತಿಗಳನ್ನು ವಿಜ್ಞಾಪಿಸಿಕೊಳ್ಳಲು ನಮ್ಮೊಳಗೆ ಯಾವ ವಿಧವಾದ ಏರ್ಪಾಡುಗಳನ್ನೂ ಮಾಡಿಕೊಂಡಿರಲಿಲ್ಲ. ಆ ಮಹಾ ಪುರುಷರು ನಮಗೆ ಬೇಕಾದವುಗಳನ್ನೆಲ್ಲಾ ತಾವೇಪೂರ್ವಭಾವಿಯಾಗಿ ತಿಳಿದುಕೊಂಡು, ಅವು ನಮ್ಮ ದೃಷ್ಟಿಗೆ ಗೋಚರವಾಗುವುದರೊಳಗಾಗಿ ತಾವೇ ನಡಿಸಿಕೊಡುತ್ತಿದ್ದರು. ಈ ವಿಧವಾದ ಸರ್ಕಾರೀ ಹುದ್ದೆಗಳಲ್ಲಿ ಎಲ್ಲ ಪಂಗಡದವರಿಗೂ ಸರಿಯಾದ ಪ್ರವೇಶವನ್ನು ಉಂಟುಮಾಡುವುದಕ್ಕೋಸ್ಕರ, ಪೂರ್ವದಲ್ಲಿ ಸರ್.ಕೆ. ಶೇಷಾದ್ರಿ ಅಯ್ಯರವರು ಆಚರಣೆಯಲ್ಲಿಟ್ಟಿದ್ದ ಜುಡಿಷಲ್ ಪ್ರೊಬೇಷನರುಗಳನ್ನು ನೇಮಿಸುವ ಕ್ರಮವನ್ನು ಪುನಃ ಜಾರಿಗೆ ತರಬೇಕು. ಮೊದಲಲ್ಲಿ ಅವರೂ ಬಳಿಕ ಸರ್.ಪಿ.ಎನ್. ಕೃಷ್ಣಮೂರ್ತಿಯವರೂ ನೇಮಿಸಿದ ಜುಡಿಷಲ್ ಪ್ರೊಬೇಷನರುಗಳನ್ನು ನಾನಾ ಮುಖದಲ್ಲಿ ಪರೀಕ್ಷಿಸಿ ನೋಡಿ, ಅವರಿಗಿರುವ ಕಾರ್ಯ ನಿರ್ವಾಹ ಶಕ್ತಿಯಲ್ಲಿ ಯಾವ ನ್ಯೂನತೆಯೂ ಇಲ್ಲವೆಂದು ಕಂಡುಬಂದಿದೆ. ಅವರಲ್ಲಿ ಕೆಲವರು ಗೌರವವುಳ್ಳ ದೊಡ್ಡ ದೊಡ್ಡ ಹುದ್ದೆಗಳನ್ನು ಪಡೆದು, ತಮಗೆ ಖ್ಯಾತಿಯನ್ನೂ ಸಂಸ್ಥಾನಕ್ಕೆ ಲಾಭವನ್ನೂ ಆರ್ಜಿಸಿರುತ್ತಾರೆ. ಪ್ರಾರಂಭದಲ್ಲಿ ಸರಿಯಾದವರನ್ನು ಹುಡುಕಿ ನೇಮಿಸುತ್ತಾ ಬಂದರೆ, ಅದೇ ಪದ್ಧತಿಯು ಪುನಃ ಸಫಲವಾಗಿ ನಡೆಯದೆ ಹೋಗುವುದಕ್ಕೆ ಕಾರಣವೇನೂ ಇರುವುದಿಲ್ಲ.

ಈಗ ಯೂರೋಪ್ ಖಂಡದೊಳಗೆಲ್ಲ ಹಬ್ಬಿಕೊಂಡು, ಬ್ರಿಟಿಷ್ ಸರ್ಕಾರದವರು ನ್ಯಾಯ ಸತ್ಯಗಳ ಪರಿಪಾಲನೆಗೋಸ್ಕರ ಪ್ರವೇಶಮಾಡಿ ಹೋರಾಡುತ್ತಿರುವ, ಬಹು ಪ್ರಾಣಿನಾಶಕರವಾದ ಯುದ್ಧದ ವಿಷಯವನ್ನು ಈ ಸಂದರ್ಭದಲ್ಲಿ ನಾನು ಪ್ರಸ್ತಾಪಿಸಲಪ್ಪಣೆಬೇಡುತ್ತೇನೆ. ಈ ಘೋರ ಯುದ್ಧವು ಇಂಡಿಯದಲ್ಲಿರುವ ಸಕಲ ವಿಧ ಪ್ರಜೆಗಳಲ್ಲಿಯೂ, ಮೈಸೂರು ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿಯೂ, ದೃಢವಾದ ಭಕ್ತಿ ಭಾವನೆಗಳನ್ನು ಹುಟ್ಟಿಸಿರುವುದಲ್ಲದೆ, ಬ್ರಿಟಿಷ್ ಪರಿಪಾಲನೆಯಿಂದ ಇಂಡಿಯಾ ದೇಶಕ್ಕೂ ಇಂಡಿಯ ದೇಶೀಯರಿಗೂ ಲಭಿಸಿರತಕ್ಕ ಅಪರಿಮಿತ ಪ್ರಯೋಜನಗಳನ್ನು ವ್ಯಕ್ತವಾಗಿ ತೋರ್ಪಡಿಸಿರುತ್ತದೆ. ಈ ಯುದ್ಧದ ಖರ್ಚಿಗಾಗಿ ನಮ್ಮ ಶ್ರೀಮನ್ಮಹಾರಾಜರವರು ಮಾಡಿರತಕ್ಕ ಅನರ್ಘವಾದ ದ್ರವ್ಯ ಸಹಾಯವು ತದ್ರಾಜ ವಂಶೀಯರಿಗೆ ಸಪ್ರಜವಾಗಿರುವದಲ್ಲದೆ, ಅವರ ಸಕಲ ಪ್ರಜೆಗಳ ಮನಸ್ಸಿನಲ್ಲಿಯೂ ಅತಿಶಯವಾದ ಅಭಿಮಾನವೂ ಆನಂದವೂ ಉದ್ಭವಿಸುವಂತೆ ಮಾಡಿರುತ್ತದೆ. ನಾವೂ ಕೂಡ ನಮ್ಮ ಶ್ರೀಮನ್ಮಹಾರಾಜರವರ ಮೇಲ್ಪಂಙ್ತಿಯನ್ನನುಸರಿಸಿ,

ನಮ್ಮ ನಮ್ಮ ಕರ್ತವ್ಯಾನುಸಾರವಾಗಿ ಯುದ್ಧದ ಫಂಡಿಗೂ, ವೈಸರಾಯಿಯವರು ಸ್ಥಾಪಿಸಿರುವ ರಿಲೀಫ್ ಫಂಡಿಗೂ ಸಹಾಯವನ್ನು ಮಾಡಲಪೇಕ್ಷಿಸುತ್ತೇವೆ.

ಮೈಸೂರು.

1914ನೆಯ ಇಸವಿ ಸೆಪ್ಟಂಬರು 30

ತಮ್ಮ ಅತ್ಯಂತ ವಿಧೇಯನಾದ,
ಮಹಮ್ಮದ್ ಅಬ್ದುಸ್ ಖಾನ್,
ಮೈಸೂರು ಸೆಂಟ್ರಲ್ ಮಹಮ್ಮದೀಯ ಅಸೋಸಿಯೇಷನ್ ಪ್ರಜಾಪ್ರತಿನಿಧಿ.

VI.

To

M. VISVESVARAYA, Esq., B.A., L.C.E., M.I.C.E., C.I.E.,
Dewan of Mysore.

Respected Sir,

On behalf of the citizens of Nanjangud town, we, the members of the Municipal Council, beg to offer our heartfelt thanks and gratitude to the Government of His Highness the Maharaja for the liberal and munificent grant of fifty thousand rupees for the improvement of this important place of pilgrimage.

We have, in you Sir, at the head of the Government, an Administrator, whose constant endeavour is to secure progress and prosperity to all the subjects of His Highness the Maharaja, and while the benefits of the several liberal and enlightened measures for improvement designed by His Highness' Government are being extended to all the important places in the State, we, the inhabitants of this sacred town, deem it our special fortune that the Government are evincing a very keen interest in the welfare and improvement of our town. Above all, we have the rare and unique privilege of being visited by our august Sovereign every month on full-moon days as has been the immemorial practice of the Royal House of Mysore.

In the short time which has elapsed since the granting of extended privileges of Self-Government to our town, the success that has been achieved is encouraging and we hope to show better results in future. The non-official members of the Municipal Council are quite alive to the powers placed in their hands and feel the heavy responsibilities that they are called upon to discharge.

We beg to suggest for the kind consideration of the Government that the representatives of the various Municipal bodies may be made to meet in a conference annually to compare results and to discuss practical measures for the further improvement of the working of these institutions.

We earnestly hope that the Government will continue to evince the same interest in the welfare of our town and its people, which they have been now showing.

We pray that you will communicate to His Highness the Maharaja our genuine gratitude for all the good that has been done to us and our abiding loyalty and devotion to His Highness' throne and person.

We sincerely offer our prayers to *Lord Nanjundeswara* that *He* may shower *His* choicest blessings on His Highness the Maharaja and the Royal family and grant to His Highness long life and prosperity.

We beg to remain,
Respected Sir,
Your most obedient and humble citizens,

K. Venkataswamayya,
and other members of the Municipal Council
of Nanjangud.

Translation of the above.

VI.

ಮೈಸೂರು ಸಂಸ್ಥಾನದ ದಿವಾನರವರಾದ ಶ್ರೀಮರ್ ಎಂ. ವಿಶ್ವೇಶ್ವರಯ್ಯ,
ಬಿ. ಎ., ಎಲ್. ಸಿ. ಇ., ಎಂ. ಐ. ಸಿ.ಇ., ಸಿ. ಐ. ಇ., ಯವರ ಸನ್ನಿಧಿಯಲ್ಲಿ.

ಮಹಾಸ್ವಾಮಿ,

ನಂಜನಗೂಡು ಟವನಿನ ನಿವಾಸಿಗಳ ಪರವಾಗಿ ಮ್ಯುನಿಸಿಪಲ್ ಕೌನ್ಸಿಲಿನ ಮೆಂಬರುಗಳಾದ ನಾವು, ಮುಖ್ಯ ಯಾತ್ರಾಸ್ಥಳವಾಗಿರುವ ಈ ಊರಿನ ಅಭಿವೃದ್ಧಿಗೋಸ್ಕರ ಶ್ರೀಮರ್ ಮಹಾರಾಜರವರ ಸರ್ಕಾರದವರು ಬಹಳ ಔದಾರ್ಯದಿಂದ ಭಾರಿಯಾಗಿ ಐವತ್ತು ಸಾವಿರ ರೂಪಾಯಿಗಳ ಗ್ರಾಂಟನ್ನು ಕೊಟ್ಟಿರುವದಕ್ಕಾಗಿ ಕೃತಜ್ಞತಾ ಪೂರ್ವಕವಾದ ನಮ್ಮ ವಂದನೆಗಳನ್ನು ತಿಳಿಸುತ್ತೇವೆ.

ತಾವು ಸರ್ಕಾರದ ಆಡಳಿತಗಳನ್ನು ನೋಡಿಕೊಳ್ಳತಕ್ಕದ್ದರಲ್ಲಿ ಮುಖ್ಯ ಅಧ್ಯಕ್ಷರಾಗಿದ್ದುಕೊಂಡು ಶ್ರೀಮರ್ ಮಹಾರಾಜರವರ ಪ್ರಜೆಗಳಿಗೆ ಅಭಿವೃದ್ಧಿಯನ್ನೂ ಸಂಪತ್ತನ್ನೂ ಸಂಪಾದಿಸಿಕೊಡುವದರಲ್ಲಿ ಸದಾನಿರತರಾಗಿರುತ್ತೀರಿ. ಶ್ರೀಮರ್ ಮಹಾರಾಜರವರ ಸರ್ಕಾರದಿಂದ ಉದ್ದೇಶಿಸಲ್ಪಟ್ಟ ನಾನಾ ಅಭಿವೃದ್ಧಿಯ ಏರ್ಪಾಡುಗಳ ಪ್ರಯೋಜನವನ್ನು ಈ ಸಂಸ್ಥಾನದ ಸಮಸ್ತ ಮುಖ್ಯ ಮುಖ್ಯ ಸ್ಥಳಗಳಿಗೆ ವ್ಯಾಪಿಸುವಂತೆ ಮಾಡುತ್ತಾ ಇದ್ದೀರಿ. ನಮ್ಮ ಟವನಿನ ಅಭಿವೃದ್ಧಿವಿಷಯದಲ್ಲಿಯೂ ಸರ್ಕಾರದವರು ವಿಶೇಷ ಆಸಕ್ತಿಯನ್ನು ತೋರಿಸುತ್ತಿರುವದು ಪವಿತ್ರವಾದ ಈ ಟವನಿನ ನಿವಾಸಿಗಳ ಪುಣ್ಯೋದಯವೆಂದು ನಾವು ತಿಳಿದಿರುತ್ತೇವೆ. ಇದೂ ಅಲ್ಲದೆ ಮಹನೀಯರಾದ ನಮ್ಮ ಮಹಾರಾಜರವರು, ರಾಜವಂಶೀಯರಿಗೆ ಅನಾದಿ ಕಾಲದಿಂದಲೂ ಸಹಜವಾಗಿ ಬಂದಿರುವ ಪುರಾತನ ಪದ್ಧತಿಯನ್ನು ಅನುಸರಿಸಿ, ಪ್ರತಿ ವೈಶಾಖದಲ್ಲಿಯೂ ಪೂರ್ಣಿಮಾ ದಿವಸ ನಮ್ಮ ಟವನಿಗೆ ದಯೆಮಾಡಿಸುತ್ತಿರುವುದು ನಮಗಳ ಭಾಗ್ಯಾತಿಶಯವಾಗಿದೆ.

ನಮ್ಮ ಟವನಿಗೆ ಇಲ್ಲಿನ ಆಡಳಿತಗಳನ್ನು ಸ್ವಂತವಾಗಿ ನೋಡಿಕೊಳ್ಳತಕ್ಕ ಬಗ್ಗೆ ಹೆಚ್ಚು ಅಧಿಕಾರಗಳನ್ನು ಕೊಟ್ಟು ಕೇವಲ ಸ್ವಲ್ಪ ಕಾಲವೇ ಆಗಿದ್ದರೂ, ಇದುವರೆಗುಂಟಾಗಿರುವ ಪ್ರಯೋಜನವೇ ಪ್ರೋತ್ಸಾಹಕರವಾಗಿರುವುದಲ್ಲದೆ, ಮುಂದೆ ಇನ್ನೂ ಉತ್ತಮವಾದ ಫಲಿತಾಂಶಗಳು ಕಾಣಬಹುದೆಂದು ನಾವು ಭಾವಿಸಿರುತ್ತೇವೆ. ಮ್ಯುನಿಸಿಪಲ್ ಕೌನ್ಸಿಲಿಗೆ ಸೇರಿದ ಸರ್ಕಾರೀ ಉದ್ಯೋಗಸ್ಥರಲ್ಲದ ಮೆಂಬರುಗಳು ತಮ್ಮ ಅಧಿಕಾರಗಳನ್ನೂ ತಮ್ಮ ಕರ್ತವ್ಯಗಳನ್ನೂ ಚೆನ್ನಾಗಿ ಬಲ್ಲವರಾಗಿರುತ್ತಾರೆ.

ಮ್ಯುನಿಸಿಪಾಲಿಟಿಗಳ ಕೆಲಸಗಳನ್ನು ಇನ್ನೂ ಉತ್ತಮ ಸ್ಥಿತಿಗೆ ತರಲು ಯಾವ ಯಾವ ಕಾರ್ಯರೂಪವಾದ ಏರ್ಪಾಟುಗಳು ಆವಶ್ಯಕವೆಂಬುದನ್ನು ಚರ್ಚಿಸುವದಕ್ಕೂ, ಫಲಿತಾಂಶಗಳನ್ನು ಹೋಲಿಸಿ ನೋಡುವದಕ್ಕೂ, ನಾನಾಮ್ಯುನಿಸಿಪಲ್ ಕೌನ್ಸಿಲುಗಳ ಪ್ರತಿನಿಧಿಗಳು ಪ್ರತಿವರ್ಷವೂ ಒಂದು ಸ್ಥಳದಲ್ಲಿ ಸಭೆ ಸೇರುವಂತೆ ಮಾಡತಕ್ಕ ವಿಷಯವನ್ನು, ಸರ್ಕಾರದವರ ದಯಾ ಪೂರ್ವಕವಾದ ಆಲೋಚನೆಯ ಬಗ್ಗೆ ನಾವು ಅರಿಕೆ ಮಾಡಲಪೇಕ್ಷಿಸುತ್ತೇವೆ.

ಸರ್ಕಾರದವರು ನಮ್ಮ ಟವನಿನ ಮತ್ತು ಅದರ ನಿವಾಸಿಗಳ ಯೋಗಕ್ಷೇಮದ ವಿಷಯದಲ್ಲಿ ಈಗ ತೋರಿಸುತ್ತಿರುವ ಆಸಕ್ತಿಯನ್ನು ಮುಂದೆಯೂ ಅದೇರೀತಿಯಲ್ಲಿ ತೋರಿಸುತ್ತಾ ಬರುವರೆಂದು ನಾವು ಹಾರೈಸುತ್ತೇವೆ.

ನಮಗಳಿಗೆ ಮಾಡಿರುವ ಉಪಕಾರಗಳ ವಿಷಯದಲ್ಲಿ ನಾವು ನಿಜವಾಗಿ ಕೃತಜ್ಞರಾಗಿರುತ್ತೇವೆಂಬ ಅಂಶವನ್ನೂ, ಶ್ರೀಮರ್ ಮಹಾರಾಜರವರ ವಿಷಯದಲ್ಲಿಯೂ, ಮಹಾಸ್ವಾಮಿಯವರ ಸಿಂಹಾಸನಾಧಿಪತ್ಯದ ವಿಷಯದಲ್ಲಿಯೂ ನಾವು ನಿಜವಾದ ರಾಜಭಕ್ತಿ ವಿಶ್ವಾಸಗಳುಳ್ಳವರಾಗಿರುತ್ತೇವೆಂಬ ಅಂಶವನ್ನೂ, ತಾವು ನಮ್ಮ ಶ್ರೀಮರ್ ಮಹಾರಾಜರವರಿಗೆ ಅರಿಕೆ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಸರ್ವ ಚೈತನ್ಯಸ್ವರೂಪನಾದ ನಂಜುಂಡೇಶ್ವರನು ಶ್ರೀಮರ್ ಮಹಾರಾಜರವರಿಗೂ, ರಾಜ ವಂಶೀಯರಿಗೂ, ಹೆಚ್ಚಾದ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ದಯೆಪಾಲಿಸಿ ಕಾಪಾಡುತ್ತಾ ಬರಬೇಕೆಂದು ನಾವು ಪ್ರಾರ್ಥಿಸುತ್ತೇವೆ.

ತಮ್ಮ ಅತ್ಯಂತ ವಿಧೇಯರಾದ,
ಕೆ. ವೆಂಕಟಶಾಮಯ್ಯ ಮೊದಲಾದ.
ನಂಜನಗೂಡು ಮ್ಯುನಿಸಿಪಲ್ ಕೌನ್ಸಿಲಿನ ಮೆಂಬರುಗಳು.

VII.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರಾಜಾ ಸಾಪೇಬ್ಬಹಾದುರವರ ದಿವಾನರವೆರೂ ಮತ್ತು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷರೂ ಆದ ವಿ॥ ಎಮ್. ವಿಶ್ವೇಶ್ವರಯ್ಯ, ಬಿ.ಎ., ಸಿ.ಐ.ಇ.,
ಯವರ ಸನ್ನಿಧಿಯಲ್ಲಿ.

ಸ್ವಾಮಿ,

ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ಪ್ರತಿನಿಧಿ ಸಭೆಯ ಕಾರ್ಯಗಳು ಸುಲಲಿತವಾಗಿ ನೆರವೇರಲು ಪ್ರೋತ್ಸಾಹವನ್ನು ಸಮಯೋಚಿತ ಪರಿಷ್ಕರಣೆಯಿಂದ ದಯಪಾಲಿಸುತ್ತಾ ಇರುವುದಕ್ಕೆ ನಾವುಗಳು ಕೃತಜ್ಞರಾಗಿದ್ದೇವೆ.

ತಾವು ಈ ಸಂಸ್ಥಾನಕ್ಕೆ ಅಧಿಕಾರಿಗಳಾಗಿಯೂ, ವಿಶೇಷತಃ ಈ ಪದವಿಯನ್ನು ಅಲಂಕರಿಸಿದ ಕೂಡಲೇ ಈ ಸಂಸ್ಥಾನದ ರಾಜಕೀಯವಿದ್ಯಮಾನಗಳಲ್ಲೂ, ಸಂಪದಭ್ಯುದಯದಲ್ಲೂ, ನ್ಯಾಯಧರ್ಮಗಳಲ್ಲೂ, ಈ ಸಂಸ್ಥಾನಕ್ಕೆ ಹೆಚ್ಚಾದ ಗೌರವವೂ, ಪ್ರಯೋಜನವೂ, ಅವಶ್ಯಕವೂ ಆದ ಅನೇಕ ವಿಷಯಗಳನ್ನು ಮಾಡುತ್ತಲಿರೋಣವಾಗಿದೆ. ಇವುಗಳಲ್ಲಿ ಸಾರ್ವಭೌಮ ಸರ್ಕಾರದೊಡನೆ ನಮ್ಮ ಸರ್ಕಾರಕ್ಕೆ ನಡೆದಿರುವ "ಮೈಸೂರು ಟ್ರೀಟಿ, ಕನ್ನಂಬಾಡಿ ರಿಜರ್ವಾಯಿರ್ ಕೆಲಸಗಳೂ, ಬಳಮೋರ್ಗಗಳ ರೈಲ್ವೆ ಬಡಾವಣೆ, ಸಂಪದಭ್ಯುದಯ ಸಮಾಜದ ಕೃಷಿ, ಕೈಗಾರಿಕೆ, ವಿದ್ಯಾಭ್ಯಾಸ ಇವುಗಳ ವಿಚಾರಣೆ, ತಮ್ಮ ಬಳದೇಕದ ಸಂಚಾರ, ನ್ಯಾಯವಿಧಾಯಕ ಸಭೆಯ ವಿಸ್ತರಣೆ, ರಾಜ್ಯಾಡಳಿತಗಳ ವಿತರಣೆ, ಖಾಸಗಿ ದೊಡ್ಡಮನುಷ್ಯರುಗಳು ಮಾಡುವ ಪ್ರಜೋಪಕಾರ ಕಾರ್ಯಗಳ ಶ್ಲಾಘನೆ, ಗಾಜಾಯೇಟ್ಸ್ ಆಗಿರೋಣಮಾತ್ರವೆ ಅಸೆಂಬ್ಲಿಮೆಂಬರಾಗಲು ಅರ್ಜಿತೆ" ಇವುಗಳಲ್ಲವೂ ಇಪ್ಪತ್ತನೆಯ ಶತಮಾನದಲ್ಲಿ ನಡೆದ ಮೈಸೂರು ಇತಿಹಾಸದ ಮುಖ್ಯಭಾಗಗಳಾಗಿವೆ.

ಹೊಸದಾಗಿ ವಿಚಾರಿಸಿರುವ "ವಿಲ್ಲೇಜ್ ಇಂಪ್ರೂವ್‌ಮೆಂಟ್ ಸ್ಕೀಮ್" ನ ಪ್ರಯೋಜನದಿಂದ ಬಹುಕಾಲದಿಂದಲೂ ನಾಗರಿಕತೆಯಲ್ಲಿ ಹಿಂದುಳಿದ ಒಳನಾಡು ಪ್ರಾಂತ್ಯವು ಒಹುಮಟ್ಟಿಗೆ ಉನ್ನತಸ್ಥಿತಿಗೆ ಬರಲು ಅನುಕೂಲವಾಗಿದೆ.

ಧರ್ಮಿಷ್ಟರೂ ಮಹಾಪರಾಕ್ರಮಿಗಳೂ ಆದ ನಮ್ಮ ಬ್ರಿಟಿಷ್ ಚಕ್ರಾಧಿಪತ್ಯದವರಿಗೆ ಶತ್ರುರಾಜರೊಡನೆ ಅವಿಶ್ರಾಂತ ಸಂಭವಿಸಿದ ಯುದ್ಧಪ್ರಸಕ್ತಿಯಲ್ಲಿ ನಮ್ಮ ಶ್ರೀಮನ್ಮಹಾರಾಜರವರು ಹೆಚ್ಚಾದ ದ್ರವ್ಯದಿಂದಲೂ, ಸುಶಿಕ್ಷಿತವಾದ ತಮ್ಮ ಸೈನ್ಯದಿಂದಲೂ ಸಹಾಯ ಮಾಡಿರುವುದು ಬ್ರಿಟಿಷ್ ಚಕ್ರಾಧಿಪತ್ಯಕ್ಕೂ, ನಮ್ಮ ಸಂಸ್ಥಾನಕ್ಕೂ ಅನುಸ್ಯೂತವಾಗಿ ಉಂಟಾಗಿರುವ ಸೌಹಾರ್ದಕ್ಕೆ ನಿದರ್ಶನವಾಗಿರುತ್ತೆ. ಈ ಸಂಸ್ಥಾನದ ಪ್ರಜೆಗಳಾದ ನಾವು ಈ ಸಂದರ್ಭದಲ್ಲಿ ಚಕ್ರಾಧಿಪತ್ಯದ ಕ್ಷೇಮಚಿಂತನೆಗೋಸ್ಕರ ನಮ್ಮಗಳ ಜೀವಿತಸರ್ವಸ್ವವನ್ನೂ ಒಪ್ಪಿಸಲು ಸಿದ್ಧವಾಗಿದ್ದೇವೆ. ಈ ಘೋರಯುದ್ಧವು ಶೀಘ್ರದಲ್ಲಿಯೇ ನಮ್ಮಕಡೆ ಜಯದೊಡನೆ ಶಾಂತಿ ಹೊಂದಲು ದೇವರನ್ನು ಪ್ರಾರ್ಥಿಸುವೆವು.

ದೈವವಶಾತ್ ಉಂಟಾಗಿರುವ ವೃಷ್ಟಿಭಂಗದಿಂದ ಕಂಗೆಡುವ ಜಾನುವಾರುಗಳ ಜೀವನಾರ್ಥವಾಗಿ ಸರ್ಕಾರದವರು "ತಕಾವಿ" ವೆಂಬಲಗನ್ನು ದಯೆಪಾಲಿಸಿರುವುದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ.

ಈ ಸಂಸ್ಥಾನದ ರಾಜ್ಯಾಡಳಿತಗಳ ಮುಖ್ಯ ವಿಷಯಗಳಲ್ಲಿ ಸಮಯೋಚಿತವಾಗಿ ಸಮ್ಮತಿಕೊಡುವ ವಾಡಿಕೆ, ಮತ್ತು ರಾಜ್ಯದ ಕಾರುಬಾರುಗಳಲ್ಲಿ ನಾವು ಕೇಳುವ ಸಮಜಾಯಿಷಿಯನ್ನು ದಯೆಪಾಲಿಸುವ ಪದ್ಧತಿ ಇವುಗಳನ್ನು ದೃಢಪಡಿಸಬೇಕಾಗಿ ಬೇಡುತ್ತೇವೆ.

ಸಂಸ್ಥಾನದ ಪ್ರಜೆಗಳಾದ ನಾವು ಶ್ರೀಮನ್ಮಹಾರಾಜಾ ಸರ್ಕಾರದಲ್ಲೂ, ಸಾರ್ವಭೌಮ ಸರ್ಕಾರದಲ್ಲೂ ನಿರತಿಶಯವಾದ ರಾಜಭಕ್ತಿಯುಳ್ಳವರಾಗಿ ಶ್ರೀಮನ್ಮಹಾರಾಜರವರಿಗೂ, ಶ್ರೀಮದ್ಯುವರಾಜರವರಿಗೂ ಶ್ರೀಸಾರ್ವಭೌಮರವರಿಗೂ ಅವರ ಉನ್ನತಪದವಿಗೆ ತಕ್ಕಂತೆ ಶ್ರೇಯಸ್ಸನ್ನು ಬಯಸುತ್ತಾ ಇರುವ ತಮ್ಮ ಅತ್ಯಂತ ವಿಧೇಯರಾದ—

ತಾ॥ 30ನೆ ಸೆಪ್ಟೆಂಬರ್ 1914,
ಮೈಸೂರು.

ಎಚ್. ಕೃಷ್ಣಶಾಸ್ತ್ರಿ ಮತ್ತು ಇತರ,
ಮೈಸೂರು ದಸರಾ ರಪ್ರಿಸೆಂಟೆಟಿವ್ ಮೆಂಬರುಗಳು.

Translation of the above.

VII.

To

M. VISVESVARAYA, Esq., B.A., C.I.E.,

The Dewan to His Highness the Maharaja of Mysore and President of the Mysore Representative Assembly.

Sir,

We beg to offer our thanks to the Government of His Highness the Maharaja of Mysore for the seasonable reforms introduced with a view to facilitate the working of the Representative Assembly.

On your entering the public service of this State and especially on your elevation to the Dewanship you were pleased to introduce several measures calculated to promote the dignity and prosperity of the State and the efficient administration of justice. The substitution of the Mysore Treaty for the old Instrument of Transfer, the operations at the Kannambadi Reservoir, the extension of internal railway communication, the activities of the Economic Conference, the development of several industries and education, the official tours, the expansion of the Legislative Council, the investigation into the working of the several departments, the recognition of public acts of utility undertaken by private gentlemen, these form the important events in the history of Mysore in the 20th century.

The Village Improvement Scheme which was recently introduced is calculated to greatly improve the condition of the interior parts of the State which have lagged behind the times in progress.

Now when the invincible British Empire is involved in righteous and unsought war, the offer by our Maharaja of a munificent war contribution and of a well disciplined army, is an indication of the continued sympathy and friendship existing between the British Empire and the Mysore State. We, the subjects of this State, are prepared to sacrifice our all and earnestly pray for a speedy and successful termination of this terrible war.

